# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 183 Issue: 183 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 22.01.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2




Many audiences find print more trustworthy than digital.
Print offers permanence and tangibility that enhance brand credibility and build consumer trust.
1,10,000+
Digital E-PAPER READERS
No.1 HAMPI TIMES LEADING VIJAYANAGARA District News Paper
Contact for Advertisements: 9448633038



ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–9

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ವಿಷಯ: ನೆಫ್ರಾನ್ ನ ರಚನೆಯನ್ನು ತೋರಿಸುವ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

24-01-2025

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

HAMPI TIMES VIJAYANAGARA

ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099
ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038


### ಆನಂದ ಬಾಣ




# ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಅರಿವು ಹೆಚ್ಚಿಸಿದ ಚಿತ್ರಸ್ಪರ್ಧೆ


## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–8ರ ಅತ್ಯುತ್ತಮ ಚಿತ್ರಗಳು | ಶ್ರೀಕಾಂತ ಎಂ(ಪ್ರಥಮ), ಸಂಜನಾ (ದ್ವಿತೀಯ), ಎಂ.ಜಿ.ರಾಮಾಂಜಿನಿ (ತೃತೀಯ)

**ಹಂಪಿ ಟೈಮ್ಸ್ ಹೊಸಪೇಟೆ**

ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸದಂತೆ ಸಂಭವನೀಯ ಚಿತ್ರಗಳನ್ನು ವಿದ್ಯಾರ್ಥಿಗಳು ಈಗಿನಿಂದಲೇ ಅಭ್ಯಾಸದಲ್ಲಿ ತೊಡಗಲಿ ಕಡಿಮೆ ಸಮಯ ದಲ್ಲಿ ಅಂದಚೆಂದವಾಗಿ ಬಿಡಿಸಲೆಂದು ಪತ್ರಿಕೆವತಿಯಿಂದ ಹಮ್ಮಿಕೊಂಡಿರುವ ವಿಜ್ಞಾನ ಚಿತ್ರಸ್ಪರ್ಧೆಗೆ ಮಕ್ಕಳು ಕಾತುರದಿಂದ ಕಾದು, ಚಿತ್ರಬಿಡುತ್ತಿದ್ದಾರೆ. ವಿಜ್ಞಾನ ಎಂದರೆ ಮುಖ ಮುರಿಯುತ್ತಿದ್ದ ವಿದ್ಯಾರ್ಥಿಗಳು ಇದೀಗ ಚಿತ್ರಬಿಡಿಸುವ ಮೂಲಕ ವಿಜ್ಞಾನದ ಅರಿವುಹೆಚ್ಚಿಸಿಕೊಳ್ಳಲಲು ಪೈಪೋಟಿ ನಡೆದಿರುವುದು ಶಿಕ್ಷಕರದಲ್ಲಿ ಸಂತಸ ತಂದಿದೆ.


ತೆರೆದ ಮತ್ತು ಮುಚ್ಚಿದ ಪತ್ರರಂಧ್ರದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ. ಚಿತ್ರಸ್ಪರ್ಧೆ–8ರಲ್ಲಿ ಹೊಸಪೇಟೆ ಚಿತ್ತವಾಡ್ಗಿ ಮುನ್ಸಿಪಲ್ ಪ್ರೌಢಶಾಲೆ ವಿದ್ಯಾರ್ಥಿ ಶ್ರೀಕಾಂತ ಎಂ. (ಪ್ರಥಮ), ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯ ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ ವಿದ್ಯಾರ್ಥಿನಿ ಸಂಜನಾ (ದ್ವಿತೀಯ) ಹಾಗೂ ಹಂಪಿನಕಟ್ಟಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಎಂ.ಜಿ.ರಾಮಾಂಜಿನಿ (ತೃತೀಯ) ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥ ಶಿವತನಯ ಎಸ್.ಸಿ. ತಿಳಿಸಿದ್ದಾರೆ. ಹೊಸಪೇಟೆ ತಾಲೂಕಿನ 15 ಶಾಲೆಗಳು, ಹ.ಬೊ.ಹಳ್ಳಿಯ 11 ಶಾಲೆ, ಕೊಟ್ಟೂರು–1, ಹರಪನಹಳ್ಳಿ–2 ಹಾಗೂ ಗದಗ, ಶಿವಮೊಗ್ಗ ಜಿಲ್ಲೆಯಿಂದ ತಲಾ ಒಂದು ಶಾಲೆ ಚಿತ್ರಸ್ಪರ್ಧೆ ಯಲ್ಲಿ ಭಾಗವಹಿಸಿವೆ. ಶಾಲಾ ಹಂತದಲ್ಲಿ ಅತ್ಯುತ್ತಮ ಚಿತ್ರಗಳನ್ನು ಬಿಡಿಸಿ ವಿಜ್ಞಾನದಲ್ಲಿ ಆಸಕ್ತಿ ಹೆಚ್ಚಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಹಂಪಿ ಟೈಮ್ಸ್ ಬಳಗ ಅಭಿನಂದಿಸಿದೆ.

>>3







**ಶ್ರೀಕಾಂತ್ ಎಂ.**
ಮುನ್ಸಿಪಲ್ ಪ್ರೌಢಶಾಲೆ
ಚಿತ್ತವಾಡಗಿ, ಹೊಸಪೇಟೆ
ಶಿಕ್ಷಕರು:ಎ.ಎಂ.ವರಲಕ್ಷ್ಮಿ






**ಸಂಜನಾ**
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ,
ಮರಿಯಮ್ಮನಹಳ್ಳಿ
ಶಿಕ್ಷಕರು:
ಜಾಕೀರ್ ಹುಸೇನ್






**ಎಂ.ಜಿ.ರಾಮಾಂಜಿನಿ**
ಸರ್ಕಾರಿ ಪ್ರೌಢಶಾಲೆ,
ಹಂಪಿನಕಟ್ಟಿ
ಶಿಕ್ಷಕರು: ಪ್ರಶಾಂತ್

### ಮೈಕ್ರೋ ನ್ಯೂಸ್

## ಪಿಎಂ ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮೀನುಗಾರಿಕೆ ಇಲಾಖೆಯ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ 2020–21 ರಿಂದ 2023–24 ನೇ ಸಾಲಿನ ಬಾಕಿ ಉಳಿದ ಫಲಾನುಭವಿ ಆಧಾರಿತ ವಿವಿಧ ಘಟಕಗಳಿಗೆ ಸಹಾಯಧನ ನೀಡಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಈ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.60% ಹಾಗೂ ಸಾಮಾನ್ಯ ವರ್ಗದ ಫಲಾನುಭವಿ ಗಳಿಗೆ ಘಟಕ ವೆಚ್ಚ ಶೇ.40 ರಂತೆ ಸಹಾಯ ಧನವನ್ನು ನೀಡಲಾಗುವುದು. ಜ.30 ರೊಳಗೆ ಅರ್ಜಿಗಳನ್ನು ಆಯಾ ತಾಲೂಕು ಮಟ್ಟದ ಕಚೇರಿಗಳಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪನಿರ್ದೇಶಕರು–7979939316, ಹೊಸಪೇಟೆ, ಹಡಗಲಿ ಸಹಾಯಕ ನಿರ್ದೇಶಕರು–9620177588, ಕೂಡ್ಲಿಗಿ, ಹರಪನಹಳ್ಳಿ ಸಹಾಯಕ ನಿರ್ದೇಶಕರು–8217725319 ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಉಪನಿರ್ದೇಶಕ ಬಿ.ಮಲ್ಲೇಶ್ ತಿಳಿಸಿದ್ದಾರೆ.

# ಆರೋಗ್ಯಕರ ಜೀವನಕ್ಕೆ ಅಡಿಪಾಯ ಯೋಗ–ಆಯುರ್ವೇದ

## ಜಿಲ್ಲಾ ಆಯುಷ್ ಅಧಿಕಾರಿ ಡಾ.ಸರಳದೇವಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಆರೋಗ್ಯಕರ ಮನಸ್ಸು, ಆರೋಗ್ಯಕರ ದೇಹ, ಸಮತೋಲನ ಆಹಾರ ಪದ್ಧತಿಯಿಂದಲೇ ಸ್ವಾಸ್ಥ್ಯ ಜೀವನ ಶೈಲಿ ಸಾಧ್ಯವಿದ್ದು ಯೋಗ ಮಾರ್ಗಕ್ಕೆ ಆಯುರ್ವೇದ ಸಹಕಾರಿಯಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಸರಳದೇವಿ ಹೇಳಿದರು.

ಹಗರಿಬೊಮ್ಮನಹಳ್ಳಿ ಪಟ್ಟಣದ ಎಂ.ಬಿ. ಕಾಲೋನಿ ಯಲ್ಲಿರುವ ಮೆಟ್ರಿಕ್ ನಂತರದ ಪರಿಶಿಷ್ಟ ಪಂಗಡದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಜಿಲ್ಲಾಡಳಿತ, ಜಿ.ಪಂ ಮತ್ತು ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿ ಚೇತನ–ಆಯುಷ್ ಸೇವಾ

>>3

### ಸಿರಿಧಾನ್ಯನಡಿಗೆ–ಆರೋಗ್ಯದಕಡೆಗೆಕಾರ್ಯಕ್ರಮಕ್ಕೆಜಿಲ್ಲಾಧಿಕಾರಿ ಚಾಲನೆ

# ಪೋಷಕಾಂಶಗಳ ಕಣಜ ಸಿರಿಧಾನ್ಯ ಬಳಸಿದಷ್ಟು ಆರೋಗ್ಯ ವೃದ್ಧಿ : ಡಿಸಿ ದಿವಾಕರ




**ಹಂಪಿ ಟೈಮ್ಸ್ ಹೊಸಪೇಟೆ**

ಸಿರಿಧಾನ್ಯಗಳಲ್ಲಿ ನಾರು ಮತ್ತು ಕಬ್ಬಿಣದ ಅಂಶಗಳು ಹೆಚ್ಚಾಗಿರುವುದರಿಂದ ಪೋಷಕಾಂಶಗಳ ಕಣಜವಿದ್ದಂತೆ ಹಾಗಾಗಿ ಸಿರಿಧಾನ್ಯಗಳ ಬಳಕೆ ಹೆಚ್ಚಾಗಬೇಕಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದಲ್ಲಿ ಕೃಷಿ ಇಲಾಖೆಯಿಂದ ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯಡಿ ನ್ಯೂಟ್ರಿ (ಪೌಷ್ಟಿಕಾಂಶ) ಸಿರಿಧಾನ್ಯಗಳ ಕಾರ್ಯಕ್ರಮ ದಡಿಯಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಸಾವಯವ ಮೇಳದಲ್ಲಿ ಸಿರಿಧಾನ್ಯಗಳ ನಡಿಗೆ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು. ಸಿರಿಧಾನ್ಯಗಳ ನಡಿಗೆ ಆರೋಗ್ಯದ ಕಡೆಗೆ ಎಂಬ ಧ್ಯೇಯವಾಕ್ಯದಲ್ಲಿ ಸಿರಿಧಾನ್ಯಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಸಾವಯವ ಮೇಳದ ನಿಮಿತ್ತ ಸಿರಿಧಾನ್ಯ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಿರಿಧಾನ್ಯಗಳಲ್ಲಿ ಕಾರ್ಬೋಹೈಡ್ರೇಟ್‌ಗಳು ಮತ್ತು ಕೊಬ್ಬಿನಾಂಶಗಳು ಬೇರೆಯ ಧಾನ್ಯಗಳಿಗೆ ಹೋಲಿಸಿದರೆ ಹೆಚ್ಚಾಗಿವೆ. ಜೊತೆಗೆ ಇವುಗಳಲ್ಲಿ ಶಕ್ತಿಶಾಲಿ ಆಂಟಿಆಕ್ಸಿಡೆಂಟ್‌ಗಳು ಮತ್ತು ರೋಗನಿರೋಧಕ ಶಕ್ತಿ ಇರುವುದರಿಂದ ಪೌಷ್ಠಿಕತೆಯ ಕಣಜಗಳೇ ಆಗಿವೆ. ಅಕ್ಕಿ ಮತ್ತು ಗೋಧಿಗಿಂತ ಐದು ಪಟ್ಟು ಪ್ರೋಟಿನ್, ವಿಟಮಿನ್, ನಾರಿನಾಂಶ ಹಾಗೂ ಖನಿಜಗಳು ಸಿರಿಧಾನ್ಯಗಳಲ್ಲಿವೆ. ಸಾಮೆ ಮತ್ತು ನವಣೆಗಳು ಪೋಷಕಾಂಶಗಳ ಸಿರಿಗಳಾಗಿವೆ. ಅಕ್ಕಿ, ರಾಗಿ ಮತ್ತು ಗೋಧಿ ಬಳಕೆಗಿಂತ ವಿವಿಧ ಪೋಷಕಾಂಶಗಳ ಗಣಿಯಂತಿರುವ ಸಿರಿಧಾನ್ಯಗಳ ಸೇವನೆ ಆರೋಗ್ಯಕ್ಕೆ ಹಿತವಾಗಿರಲಿದೆ ಎಂದರು.

ಇದೇ ವೇಳೆ ಎಪಿಎಂಸಿ ವೃತ್ತದಿಂದ, ತರಕಾರಿ ಮಾರುಕಟ್ಟೆ, ದರ್ಗಾ ಮಸೀದಿ, ಬಸ್ ನಿಲ್ದಾಣ, ಶಾನುಭೋಗ ವೃತ್ತ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ವಿವಿಧ ವಾದ್ಯವೃಂದ ಗಳೊಂದಿಗೆ ರಸ್ತೆ ಜಾಗೃತಿ ಜಾಥಾ ನಡೆಸಲಾಯಿತು.

ಈ ವೇಳೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಚಿದಾನಂದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶಾಷೂ ಮೈನುದ್ದಿನ್, ಹುಡಾ ಆಯುಕ್ತ ವೀರಣ್ಣ ಇದ್ದರು.

# ಸೊಳ್ಳೆಗಳ ಕಡಿತಕ್ಕೆ ಗ್ರಾಮಸ್ಥರು ತತ್ತರ

## ಸಿದ್ದಾಪುರ ಗ್ರಾಮಕ್ಕೊಂದೆ ಚರಂಡಿ | ಹರಿಯದ ನೀರು | ಸೊಳ್ಳೆಗಳ ಉತ್ಪತ್ತಿ ತಾಣ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಗುಂಡುಮುಣುಗು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಾಪುರ ಗ್ರಾಮದ ಅಂಬೇಡ್ಕರ್ ಕಾಲೋನಿಯಲ್ಲಿ ಚರಂಡಿ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಸಿದ್ದಾಪುರ ಗ್ರಾಮದಲ್ಲಿ ಒಂದೇ ಚರಂಡಿ ಇದ್ದು ಅದು ಸಂಪೂರ್ಣ ಕಿತ್ತು ಹಾಳಾಗಿ ಹೋಗಿದೆ. ಗ್ರಾಮಸ್ಥರೆಲ್ಲ ಉಪಯೋಗಿಸಿದ ನೀರು ಚರಂಡಿಯ ಮೂಲಕ ನೇರವಾಗಿ ಹರಿಯದೆ ವಾಸಿಸುವ ಕುಟುಂಬಗಳ ಮನೆಯ ಮುಂದೆ ನಿಂತ ಗಬ್ಬುನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಡೆಂಗ್ಯೂ ಮಲೇರಿಯಾ ಕಾಲರದಂತಹ ಸಾಂಕ್ರಾಮಿಕ ರೋಗಗಳ ಹರಡುವ ಭೀತಿ ಎದುರಾಗಿದೆ.. ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಸುಮಾರು ಹತ್ತು ವರ್ಷಗಳಿಂದ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಜನಪ್ರತಿನಿಧಿಗಳಿಗೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಅಂಬೇಡ್ಕರ್ ಕಾಲೋನಿಯಲ್ಲಿ ಚರಂಡಿ ವ್ಯವಸ್ಥೆ ಕಲ್ಪಿಸಲು ಮನವಿ ಮಾಡಿದರೆ ಸಿಸಿ ರಸ್ತೆ ಮಂಜೂರಾಗಿದೆ ಎಂದು ತಿಳಿದು ಬಂದಿದೆ. ಸಾರ್ವಜನಿಕರ ರಸ್ತೆಯ ಪಕ್ಕದಲ್ಲಿ ಇರುವ ಚರಂಡಿಯನ್ನು ಪ್ರತಿಯೊಬ್ಬ ಅಧಿಕಾರಿಗಳು ಜನಪ್ರತಿನಿಧಿಗಳು ನೋಡಿದರೂ ಜಾಣಕುರುಡುತನ ನಡೆ ಅನುಸಿರಿಸುತ್ತಿದ್ದಾರೆ ಎಂದು ಸಮಿತಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಚರಂಡಿ ವ್ಯವಸ್ಥೆ ಮಾಡಬೇಕೆಂದು ದಶಕಗಳಿಂದ ಕೇಳುತ್ತಾ ಬಂದರೂ, ಚರಂಡಿ ಬದಲಿಗೆ ಸಿಸಿ ರಸ್ತೆ ಮಾತ್ರ ಮಂಜೂರು ಮಾಡಿದ್ದಾರೆ. ಕೂಡಲೇ ಚರಂಡಿ ವ್ಯವಸ್ಥೆ ಕಲ್ಪಿಸಿ ಕೊಡದಿದ್ದಲ್ಲಿ ದಲಿತ ಸಂಘರ್ಷ ಸಮಿತಿ ಸಿದ್ದಾಪುರ ಗ್ರಾಮದ ವತಿಯಿಂದ ದಲಿತ ಸಂಘರ್ಷ ಸಮಿತಿ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳ ಮುಖಂಡತ್ವದಲ್ಲಿ ಸಂಬಂಧಪಟ್ಟ ಇಲಾಖೆಯ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಮತಿ ಎಚ್ಚರಿಸಿದೆ.




> ಗ್ರಾಮದಲ್ಲಿ ಒಂದೇ ಚರಂಡಿ ಇದ್ದು ಗಬ್ಬನಾರುತ್ತಿದೆ. ಸಾಂಕ್ರಾಮಿಕ ರೋಗಗಳ ಭೀತಿ ಹೆಚ್ಚಾಗಿದೆ. ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ. ಸಂಬಂಧಪಟ್ಟವರು ಈಗಲಾದರೂ ಇತ್ತ ಧಾವಿಸಿ ಗಮನಹರಿಸಿ. ಸಿ,ಸಿ, ಚರಂಡಿ ಕಲ್ಪಿಸಿ ಕೊಡದಿದ್ದರೆ, ಹೋರಾಟ ಮಾಡಲಾಗುವುದು.
>
> – ಡಿ ಎಂ ಈಶ್ವರಪ್ಪ
> DSS ಜಿಲ್ಲಾ ಮುಖಂಡರು ಸಿದ್ದಾಪುರ

> ನಾವು ಸಿದ್ದಾಪುರ ಗ್ರಾಮಕ್ಕೆ ಭೇಟಿ ಮಾಡಿದಾಗ ಗ್ರಾಮದ ಸ್ಥಳೀಯರು, ಸಿಸಿ ಚರಂಡಿ ಗ್ರಾಮಕ್ಕೆ ಅವಶ್ಯಕತೆ ಇದೆ ಎಂದು ತಿಳಿಸಿದರು, ನಮ್ಮ ಸಿಬ್ಬಂದಿಗೆ ಕಾಮಗಾರಿ ಎಸ್ಟಿಮೇಟ್ ಮಾಡುವಂತೆ ತಿಳಿಸಲಾಗಿತ್ತು, ತಾಂತ್ರಿಕ ದೋಷದಿಂದ ಸಿಸಿ ಚರಂಡಿ ಬದಲು ಸಿಸಿ ರಸ್ತೆ ಆಗಿದೆ, ಮತ್ತೊಮ್ಮೆ ಗ್ರಾಮಕ್ಕೆ ಭೇಟಿ ಮಾಡಿ ಸ್ಥಳ ಪರಿಶೀಲಿಸಿ ಆದಷ್ಟು ಬೇಗ ಅವಶ್ಯಕತೆ ಇರುವ ಚರಂಡಿ ವ್ಯವಸ್ಥೆಯನ್ನು ಮಾಡಲಾಗುವುದು.
>
> – ನಾಗನಗೌಡ, ಎಇಇ
> ಲೋಕೋಪಯೋಗಿ ಇಲಾಖೆ ಕೂಡ್ಲಿಗಿ

# ತೆರಿಗೆ– ನೀರಿನ ಶುಲ್ಕ ವಸೂಲಾತಿಗೆ ಅರ್ಜಿ ಆಹ್ವಾನ

## ಡೇ–ನಲ್ಮ್ ಶಾಖೆ ಸಂಪರ್ಕಿಸಲು ಮುಖ್ಯಾಧಿಕಾರಿ ಎಂ.ಪ್ರಭಾಕರ್ ಪಾಟೀಲ್ ಸೂಚನೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಎಂ.ಪ್ರಭಾಕರ್ ಪಾಟೀಲ್ ತಿಳಿಸಿದ್ದಾರೆ.

ಹಗರಿಬೊಮ್ಮನಹಳ್ಳಿ ಪುರಸಭೆ ಡೇ–ನಲ್ಮ್ ಅಭಿಯಾನದಡಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳನ್ನು ತೊಡಗಿಸಿಕೊಂಡು ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡೇ–ನಲ್ಮ್ ಯೋಜನೆಯಡಿ ರಚಿಸಲಾಗಿರುವ ಉಳಿತಾಯ ಗುಂಪುಗಳಲ್ಲಿನ ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ಯತೆ ಮೇರೆಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆದಂತವರಿಗೆ ಆದ್ಯತೆ ನೀಡಲಾಗುವುದು. ಇಚ್ಛೆಯುಳ್ಳವಂತಹ ಸ್ವ ಸಹಾಯ ಸಂಘದ ಸದಸ್ಯರುಗಳು ಫೆ.5 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಡೇ–ನಲ್ಮ್ ಶಾಖೆಗೆ ಸಂಪರ್ಕಿಸಲು ತಿಳಿಸಿದ್ದಾರೆ.

# ಗಾಂಧಿ ಭಾರತ ಮರು ನಿರ್ಮಾಣ ಪ್ರಕಟಣೆಗಳ ಬಿಡುಗಡೆ



**ಹಂಪಿ ಟೈಮ್ಸ್ ಬೆಳಗಾವಿ**

1924 ರಲ್ಲಿ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕೈಗೊಂಡ ನಿರ್ಣಯಗಳು,ಅಧ್ಯಕ್ಷೀಯ ಭಾಷಣ ಮತ್ತಿತರ ಮಾಹಿತಿಗಳು ಹಾಗೂ ಅಪರೂಪದ ಛಾಯಾಚಿತ್ರಗಳನ್ನು ಒಳಗೊಂಡು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿರುವ "ಗಾಂಧಿ ಭಾರತ ಮರು ನಿರ್ಮಾಣ" ಹಾಗೂ Reclaiming Gandhi Bharath ಕನ್ನಡ ಹಾಗೂ ಆಂಗ್ಲ ಪುಸ್ತಕಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ,ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬಿಡುಗಡೆ ಮಾಡಿದರು.

ಸುವರ್ಣ ಸೌಧದ ಆವರಣದಲ್ಲಿ ಸ್ಥಾಪಿಸಿರುವ ಬೃಹತ್ ಗಾಂಧಿ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಈ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. 1924 ರ ಕಾಂಗ್ರೆಸ್ ಅಧಿವೇಶನದ ನಿರ್ಣಯಗಳು, ಕೊಲ್ಕತ್ತಾ ಒಪ್ಪಂದ ಮತ್ತು ನೇಯ್ಗೆಯ ಮತಾಧಿಕಾರ, ಸರೋಜಿನಿ ನಾಯ್ಡು ಅವರ ವಿದೇಶಾಂಗ ಸೇವೆ,ಅಕಾಲಿಗಳಿಗೆ ಅಭಿನಂದನೆ,ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು, ಬರ್ಮಾದ ಜನರಿಗೆ ಸಹಾನುಭೂತಿ, ಕೋಹತ್ ಹಾಗೂ ಗುಲಬರ್ಗಾ ಗಲಭೆಗಳು, ಅಸ್ಪೃಶ್ಯತೆ ನಿವಾರಣೆ, ಅಧಿವೇಶನದ ಲೆಕ್ಕಪರಿಶೋಧನೆ ಸೇರಿದಂತೆ ಐತಿಹಾಸಿಕ ಮಾಹಿತಿಗಳು ಹಾಗೂ ಛಾಯಾಚಿತ್ರಗಳನ್ನು ಈ ಪುಸ್ತಕಗಳು ಒಳಗೊಂಡಿವೆ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದರಾದ ಪ್ರಿಯಾಂಕಾ ಗಾಂಧಿ, ಕೆ.ಸಿ.ವೇಣುಗೋಪಾಲ, ರಣದೀಪ್‌ಸಿಂಗ್ ಸುರ್ಜೇವಾಲಾ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಎಚ್.ಕೆ.ಪಾಟೀಲ, ಡಾ.ಜಿ.ಪರಮೇಶ್ವರ, ಸತೀಶ ಜಾರಕಿಹೊಳಿ ಮತ್ತಿತರ ಗಣ್ಯರು ವೇದಿಕೆಯಲ್ಲಿದ್ದರು.



# ಬದುಕಿಗೆ ಬೆಳಕು ಹರಿಸುವ ಮೌಲ್ಯಗಳು

ಬದುಕು ಒಂದು ನದಿಯಂತೆ. ನಿರಂತರವಾಗಿ ಹರಿಯುತ್ತಿರುವ ನೀರು ಅಲ್ಲಲ್ಲಿಯ ಕಲ್ಮಶಗಳನ್ನು ಅಲ್ಲಲ್ಲಿಯೇ ತೊಡೆದು ಹಾಕುತ್ತಾ ಹೊಸ ಹೊಳಹಿನೆಡೆಗೆ ತನ್ನನ್ನು ತಾನು ಒಡ್ಡಿಕೊಳ್ಳುತ್ತಾ ತನ್ನ ಹಾದಿಯಲ್ಲಿ ಬರುವ ಏರು ದಿಣ್ಣೆಗಳು ಕಣಿವೆ ಪಾತಾಳಗಳನ್ನು ಹತ್ತಿ ಇಳಿಯುತ್ತಾ ಸಾಗಿ ತನ್ನ ಗಮ್ಯವನ್ನು ತಲುಪುತ್ತದೆ... ಅಂತೆಯೇ ನಮ್ಮ ಬದುಕು ಕೂಡ ಇರಬೇಕು. ಒಪ್ಪಲಿ ಒಪ್ಪದೇ ಇರಲಿ ನಮ್ಮ ಬದುಕು ನದಿಯಂತೆ ಹರಿದು, ಬದುಕು ಒಡ್ಡುವ ಪ್ರತಿ ಸವಾಲುಗಳನ್ನು, ಏರಿಳಿತಗಳನ್ನು ಅನುಭವಿಸಿ ಗುರಿಯನ್ನು ತಲುಪಬೇಕು. ಹಾಗೆ ಗುರಿ ತಲುಪುವ ಹಾದಿಯಲ್ಲಿ ನಾವು ಅಳವಡಿಸಿಕೊಳ್ಳಲೇಬೇಕಾದ ಕೆಲ ಜೀವನ ಮೌಲ್ಯಗಳು ಹೀಗಿವೆ.

ಸಮಾಧಾನ....ಒಳ್ಳೆಯ ಸಂಗತಿಗಳು ಫಲಪ್ರದವಾಗಲು ಸಾಕಷ್ಟು ಸಮಯ ಬೇಕು. ಅದಕ್ಕಾಗಿ ತಾಳ್ಮೆ ಇರಲಿ. ಬದುಕಿನ ಎಂತದ್ದೇ ಪರಿಸ್ಥಿತಿಯನ್ನು ಎದೆಗುಂದದೇ ಸಮಾಧಾನದಿಂದ ಇದ್ದರೆ ಅರ್ಧ ಯುದ್ಧವನ್ನು ಗೆದ್ದಂತೆ.

ತೊಟ್ಟಿಲಿನಿಂದ ಚಟ್ಟದವರೆಗೂ ನಾವು ಸದಾ ಬಳಸುವ ಬಿದಿರಿನ ಕುರಿತು ಸಾಮಾನ್ಯವಾಗಿ ನಮಗೆಲ್ಲರಿಗೂ ಗೊತ್ತಿಲ್ಲದ ಒಂದು ಸಂಗತಿ ಇದೆ. ಭೂಮಿಯ ಅಡಿಯಲ್ಲಿಯೇ ಇರುವ ಬಿದಿರಿನ ಬೀಜ ಮೊಳಕೆ ಒಡೆಯಲು ತೆಗೆದುಕೊಳ್ಳುವ ಕಾಲ ಸುಮಾರು ಮೂರು ವರ್ಷ. ಆದರೆ ಒಂದೊಮ್ಮೆ ಮೊಳಕೆಯೊಡೆದು ಬೆಳೆಯುವ ಬಿದಿರು ಮೊದಲ ಆರು ತಿಂಗಳಲ್ಲಿಯೇ ಹತ್ತಿಪ್ಪತ್ತು ಅಡಿ ಬೆಳೆಯುತ್ತದೆ. ಸುಮಾರು 60 ವರ್ಷಗಳ ಕಾಲ ಹೀಗೆ ಬೆಳೆಯುವ ಬಿದಿರು ಅಂತಿಮವಾಗಿ ಹೂ ಬಿಟ್ಟಾಗ ಅದರ ಅವಸಾನ ಕಾಲ ಪ್ರಾಪ್ತವಾಯಿತು ಎಂದರ್ಥ. ಆರು ತಿಂಗಳು, ಒಂದು ವರ್ಷಕ್ಕೆ ಬಿದಿರು ಮೊಳಕೆ ಒಡೆಯಲೇ ಇಲ್ಲ ಎಂದು ನಾವು ನೀರು ಹಾಕುವುದನ್ನು ಬಿಟ್ಟರೆ ಅದು ಅಲ್ಲಿಯೇ ಕಮರಿ ಹೋಗುತ್ತದೆ... ಎಷ್ಟೋ ಜನ ಸಾಧಕರು ಸದ್ದಿಲ್ಲದೆ ನಿರಂತರ ಸಾಧನೆಯ ತಪಸ್ಸನ್ನು ತಮ್ಮದಾಗಿಸಿಕೊಂಡಿರುತ್ತಾರೆ.

ಒಲೆ ಉರಿಯನ್ನು ಜೋರಾಗಿ ಇಟ್ಟು ಹಾಲು ಕಾಯಿಸಿದರೆ ಹಾಲು ಉಕ್ಕಿ ಹೋಗುತ್ತದೆ... ಅದೇ ಮಂದ ಉರಿಯಲ್ಲಿ ಕಾಯಿಸಿದ ಹಾಲು ಕೆನೆಗಟ್ಟುತ್ತದೆ.... 'ಕಾಯದ ಹೊರತು ಹಾಲು ಕೆನೆಗಟ್ಟದು' ಎಂಬ ಸತ್ಯದ ಅರಿವಿನ ಮೂಲಕ ಅಂತಹ ಸಮಾಧಾನವನ್ನು ನಮ್ಮ ಬದುಕಿನಲ್ಲಿ ಅಳವಡಿಸಿ ಕೊಳ್ಳೋಣ.

ಶಾಂತಿ.... ಸದಾ ಶಾಂತ ಮನಸ್ಥಿತಿಯನ್ನು ಕಾಯ್ದುಕೊಳ್ಳುವುದು ಸವಾಲಿನ ಕೆಲಸ ನಿಜ... ಆದರೆ ಒಂದೊಮ್ಮೆ ಶಾಂತ ಮನಸ್ಥಿತಿಯನ್ನು ನಮ್ಮದಾಗಿಸಿಕೊಂಡರೆ ಬದುಕು ಸರಳ.

ಕೊಳದಲ್ಲಿ ಪ್ರಶಾಂತವಾಗಿ ತೇಲುವಂತೆ ಕಾಣುವ ಬಾತುಕೋಳಿ ನಮ್ಮ ಮನವನ್ನು ಸೆಳೆಯುತ್ತದೆ ನಿಜ.. ಆದರೆ ನೀರಿನಲ್ಲಿ ಮುಚ್ಚಿರುವ ಅದರ ಕಾಲುಗಳ ವೇಗ ಅಪರಿಮಿತ. ಅದೆಷ್ಟೇ ಅಂತರಂಗದಲ್ಲಿ ಧಾವಂತದ ಬದುಕು ನಮ್ಮದಾಗಿದ್ದರೂ ಬಹಿರಂಗದಲ್ಲಿ ಶಾಂತ ಮನಸ್ಥಿತಿಯನ್ನು ಹೊಂದಲೇ ಬೇಕು... ಹೊರಗಿನ ಭಾವಗಳ ಪ್ರತಿಫಲನ ಅಂತರಂಗದಲ್ಲಿ ಮೂಡಿ ಮನಸ್ಸು ಶಾಂತವಾಗಲು ಚಿಂತನ ಮಂಥನ, ಸುವಿಚಾರಗಳ ಹಂಚಿಕೊಳ್ಳುವಿಕೆ, ಧ್ಯಾನ ಮತ್ತು ಮನನಗಳು ನಮಗೆ ಅನುವು ಮಾಡಿಕೊಡುತ್ತವೆ. ಅಂತಹ ಶಾಂತ ಮನಸ್ಥಿತಿ ಯನ್ನು ನಾವು ನಮ್ಮಲ್ಲಿ ಅಳವಡಿಸಿ ಕೊಳ್ಳೋಣ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಭರವಸೆ.... ಇಳೆಯಲ್ಲಿ ಕವಿದ ಗಾಢಾಂಧಕಾರವನ್ನು ತೊಲಗಿಸಲು ಪುಟ್ಟದೊಂದು ಹಣತೆಯ ಬೆಳಕು ಸಾಕು. ಅಂತೆಯೇ ಬದುಕಿನಲ್ಲಿ ಎಲ್ಲವನ್ನು ಕಳೆದುಕೊಂಡಾಗಲೂ ಮುಂದೆ ಒಳ್ಳೆಯದಾಗುತ್ತದೆ ಎಂಬ ಭರವಸೆ ನಮ್ಮನ್ನು ಕಾಯುತ್ತದೆ.

ಹುಸಿಯಾದರೂ ಸರಿ ದೊಡ್ಡದಾದ ನಗು ನಮ್ಮ ಮೊಗದಲ್ಲಿ ಮೂಡಿದಾಗ ಸಕಾರಾತ್ಮಕ ಹಾರ್ಮೋನುಗಳು ಸ್ರವಿಸಿ ಧನಾತ್ಮಕತೆ ನಮ್ಮಲ್ಲಿ ಒಡ ಮೂಡುತ್ತದೆ. ಭರವಸೆ ಬದುಕಿನ ಚುಕ್ಕಾಣಿಯನ್ನು ಹಿಡಿದು ಸರಿಯಾದ ಗಮ್ಯವನ್ನು ತಲುಪಿಸಲು ಅಗತ್ಯ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತದೆಯಾದ್ದರಿಂದ ಭರವಸೆಯೇ ಬದುಕು ಎಂಬ ಸತ್ಯವನ್ನು ಮನಗಾಣಬೇಕು. ನಮ್ಮ ಬದುಕನ್ನು ಉನ್ನತವಾಗಿ ರೂಪಿಸಿಕೊಳ್ಳಲು ಭರವಸೆಯನ್ನು ನಮ್ಮದಾಗಿಸಿಕೊಳ್ಳೋಣ.



ನಮ್ರತೆ.... ತೆನೆ, ಕಾಯಿ ಹೊತ್ತ ಫಸಲು ಬಾಗುವುದು. ತುಂಬಿದ ಕೊಡ ತುಳುಕುವುದಿಲ್ಲ ಎಂಬ ಮಾತಿನಂತೆ ನಮ್ರತೆಯಿಂದ ನಾವು ಬದುಕಿನಲ್ಲಿ ಹೆಚ್ಚಿನದನ್ನು ಸಾಧಿಸಬಹುದು.. ನಮ್ಮ ಸುತ್ತಣ ಸಮಾಜದ ದೀನ, ದುರ್ಬಲರ ಸೇವೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ವಿನಮ್ರತೆಯನ್ನು ಬದುಕಾಗಿಸಿ ಕೊಳ್ಳಬೇಕು. ಆತ್ಮವಿಶ್ವಾಸದಿಂದ ಬಾಗುವ ಕಾಯ ಜನರ ಜೀವನದ ಭರವಸೆಯಾಗಿ ಅವರ ಮನದ ಅಂಗಳದಲ್ಲಿ ಸದಾ ಅಮರವಾಗಿರುತ್ತದೆ.ಹೆತ್ತವರು, ಗುರು ಹಿರಿಯರಿಗೆ ತೋರುವ ವಿನಮ್ರತೆ ನಮ್ಮ ಬದುಕಿಗೆ ಸದಾ ಒಳಿತನ್ನು ಉಂಟುಮಾಡುತ್ತದೆ. ವಿನಮ್ರತೆಯೇ ಬಾಳಿನ ಮೈಲುಗಲ್ಲಾಗಲಿ.

ದಯೆ.... ದಯವಿಲ್ಲದ ಧರ್ಮ ಅದಾವುದಯ್ಯ ದಯವೇ ಧರ್ಮದ ಮೂಲವಯ್ಯ, ದಯ ಬೇಕು ಸಕಲ ಪಶು ಪಕ್ಷಿಗಳಲ್ಲಿ ಎಂದು ಸಾರಿದ ಬಸವಣ್ಣನ ನಾಡಿನ ಮಕ್ಕಳು ನಾವು. ದೇವರು ನಮಗೆ ಸಾಕಷ್ಟು ಕೊಟ್ಟು ಮರೆತಿರಬಹುದು... ಆದರೆ ನಮಗಿಂತ ಕಡಿಮೆ ಅವಕಾಶಗಳನ್ನು ಹೊಂದಿರುವ ಜನರ ಮೇಲೆ ಪ್ರೀತಿ, ವಿಶ್ವಾಸ, ಕರುಣೆ, ದಯೆಯನ್ನು ಹೊಂದಿದ್ದು ಅವರ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡಲೇಬೇಕು. ಪರರ ಕುರಿತು ದಯಾ ಭಾವ, ಕ್ಷಮಾ ಗುಣ, ಸಹನೆ, ಸಹಾನುಭೂತಿಗಳನ್ನು ಹೊಂದಿದ್ದು ಸೇವೆಯಲ್ಲಿಯೇ ಪೂಜೆ ಎಂಬ ಸತ್ಯವನ್ನು ಮನಗಾಣಬೇಕು.... ಪ್ರಸ್ತುತ ಜಗತ್ತಿನಲ್ಲಿ ಅತ್ಯವಶ್ಯಕವಾದುದು ಆರ್ಟಿಫಿಶಿಯಲ್ ಇಂಟಲಿಜೆನ್ಸಿ (ಎ ಐ ) ಅಲ್ಲ ಬದಲಾಗಿ ಹ್ಯೂಮನ್ ಇಂಟಿಮಸಿ (ಹೆಚ್ ಐ ) ಅಂದರೆ ನಮ್ಮ ಇಂದಿನ ಅವಶ್ಯಕತೆ ಕೃತಕ ಬುದ್ಧಿಮತ್ತೆಯಲ್ಲ ಬದಲಾಗಿ ಮಾನವೀಯ ಸಂಬಂಧಗಳಲ್ಲಿ ಆತ್ಮೀಯತೆ, ಸೌಹಾರ್ದತೆ ಮತ್ತು ಸಹಾನುಭೂತಿಯ ಅವಶ್ಯಕತೆ ಇದೆ.

ಆತ್ಮವಿಶ್ವಾಸ... ಆತ್ಮವಿಶ್ವಾಸವನ್ನು ಹೊಂದಿರುವ ಮೂಲಕ ನಮ್ಮ ಜಾಣ್ಮೆ ಮತ್ತು ಪ್ರತಿಭೆಯನ್ನು ಮುಚ್ಚಿಟ್ಟುಕೊಳ್ಳದೆ ಮತ್ತೊಬ್ಬರ ಏಳಿಗೆಗಾಗಿ ಅವುಗಳನ್ನು ಬಳಸುವುದು. ನಮ್ಮ ಆತ್ಮವಿಶ್ವಾಸ ನಮ್ಮನ್ನು ಮಾತ್ರ ಔನ್ನತ್ಯದೆಡೆಗೆ ಕರೆದೊಯ್ಯದೆ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗುವಂತೆ ನಮ್ಮನ್ನು ನಾವು ರೂಪಿಸಿಕೊಳ್ಳಬೇಕು.

ಗಮನಹರಿಸುವಿಕೆ.... ಬೇರೆಯವರ ಅಭದ್ರತೆ ಮತ್ತು ನಮ್ಮ ಕುರಿತಾದ ಅವರ ಹೇಳಿಕೆಗಳು ನಮಗೆ ತೊಂದರೆ ಎಂದು ಭಾವಿಸಿ ನಮ್ಮ ಗಮನವನ್ನು ಕ್ಷುಲ್ಲಕ ವಿಚಾರಗಳತ್ತ ಹರಿಸಬಾರದು. ನಮ್ಮ ಬದುಕಿನ ಕುರಿತು ಸೂಕ್ತ ಅವಗಾಹನೆ ಮತ್ತು ನಿಖರ ಗುರಿಯನ್ನು ಹೊಂದಿದ್ದು ಉನ್ನತ ಸಾಧನೆಯತ್ತ ಗಮನ ಹರಿಸಬೇಕು.

ಸ್ವಾತಂತ್ರ... ಬೇರೆಯವರು ನಮ್ಮ ಯೋಚನೆಗಳನ್ನು, ಭಾವನೆಗಳನ್ನು ಮತ್ತು ಬದುಕನ್ನು ನಿಯಂತ್ರಿಸದಂತಹ ಸ್ವಾತಂತ್ರ್ಯವನ್ನು ನಾವು ಬದುಕಿನಲ್ಲಿ ಹೊಂದಿರಲೇಬೇಕು. ನಮ್ಮ ಒಳಿತು ಕೆಡುಕುಗಳ ಕುರಿತು ನಮಗೆ ಉತ್ತಮ ಅವಗಾಹನೆ ಇದ್ದು ನಮ್ಮ ಬದುಕನ್ನು ಸ್ವತಂತ್ರವಾಗಿ ನಿರ್ಧರಿಸುವ, ನಾವು ನಾವೇ ಆಗಿ ಬದುಕುವ ಸ್ವಾತಂತ್ರ್ಯ ನಮಗಿರಬೇಕು.

ಪ್ರೀತಿ.... ನಮ್ಮಲ್ಲಿ ಅಪಾರ ಪ್ರೀತಿಯ ಭಂಡಾರವನ್ನು ನಾವು ಹೊಂದಿರಲೇಬೇಕು. ಬೇರೆಯವರಲ್ಲಿ ಪ್ರೀತಿಯನ್ನು ಅರಸುವ ಮುನ್ನ ನಮ್ಮಲ್ಲಿ ಸದಾ ಬತ್ತದ ಪ್ರೀತಿಯ ತೊರೆ ಇರಬೇಕು. ನಮ್ಮ ನಿರೀಕ್ಷೆಗೆ ತಕ್ಕಂತೆ ವರ್ತಿಸುವವರನ್ನು ಮಾತ್ರ ಪ್ರೀತಿಸದೆ ನಮ್ಮ ಜೊತೆಗಿರುವ ಎಲ್ಲರನ್ನೂ ಅವರ ಎಲ್ಲಾ ಅವಗುಣಗಳ ಸಮೇತ ಪ್ರೀತಿಸಿ ಸಾಧ್ಯವಾದರೆ ಅವರಲ್ಲಿ ಉತ್ತಮ ಬದಲಾವಣೆಗಳನ್ನು ತರಲು ಪ್ರಯತ್ನಿಸಬೇಕು. ಬದುಕು ಎಂದರೆ ನಮ್ಮ ವೈಯುಕ್ತಿಕ ಪ್ರಗತಿಯಲ್ಲ... 'ಸರ್ವೇ ಜನಾ ಸುಖಿನೋ ಭವಂತು' ಎಂಬ ಸಂಸ್ಕೃತ ಉಕ್ತಿಯಂತೆ ಎಲ್ಲರ ಸುಖದಲ್ಲಿಯೇ ನಮ್ಮ ಜೀವನದ ಯಶಸ್ಸು ಅಡಗಿದೆ ಎಂಬ ಅರಿವನ್ನು ಹೊಂದಿದ್ದು ಬದುಕಿನಲ್ಲಿ ಈ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು.

ರಾಷ್ಟ್ರಕವಿ ಕುವೆಂಪು ಅವರು ಹೇಳಿರುವಂತಹ ಮಾತಿನ ತಾತ್ಪರ್ಯ ಹೀಗಿದೆ... 'ಮನುಷ್ಯ ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟುತ್ತಾನೆ... ಆದರೆ ನಾವು ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಅವರ ಮೇಲೆ ಹೇರಿ ಅವರನ್ನು ಸಂಕುಚಿತ ಮನಸ್ಕರನ್ನಾಗಿಸುತ್ತೇವೆ... ಹಾಗಾಗಕೂಡದು.... 'ವಸುಧೈವ ಕುಟುಂಬಕಂ' ಎಂಬ ಉಕ್ತಿಯಂತೆ ಇಡೀ ಜಗತ್ತಿನ ಜನರೆಲ್ಲ ಭ್ರಾತೃತ್ವವನ್ನು ಹೊಂದಿರಬೇಕು... ಅಂತಹ ಜಗತ್ತನ್ನು ನಿರ್ಮಾಣ ಮಾಡುವ ಆಶಯದೊಂದಿಗೆ...

# ಬದುಕಿನ ಸಾರ್ಥಕ ಕ್ಷಣ

ಈ ಬದುಕು ಕ್ಷಣಿಕ. ಇಲ್ಲಿ ಪ್ರತಿಕ್ಷಣವೂ ಹೋರಾಟವೇ. ಕಷ್ಟ ಸುಖ ನೋವು ನಲಿವುಗಳೊಂದಿಗೆ ಹೋರಾಟ ಮಾಡಿ ಜಯಿಸಿದರೆ ಬದುಕು ಸಾರ್ಥಕವಾಗುತ್ತದೆ. ಇಲ್ಲಿ ನಾವು ಎಷ್ಟು ಕಾಲದವರೆಗೆ ಜೀವಿಸುತ್ತೇವೆ ಎನ್ನುವುದು ಮುಖ್ಯವಲ್ಲ. ನಾವು ಹೇಗೆ ಜೀವಿಸುತ್ತೇವೆ ಎನ್ನುವುದು ಬದುಕಿನ ಸಾರ್ಥಕತೆಯ ಮಾನದಂಡವಾಗುತ್ತದೆ.

ಹಸಿದವನಿಗೆ ಊಟವ ನೀಡಿದರೆ, ಬೇರೆಯವರ ಸಂತೋಷಕ್ಕಾಗಿ ತನ್ನೊಳಗೆ ಅಡಗಿರುವ ನೋವನ್ನು ಮರೆಮಾಚಿ ಬದುಕಿದರೆ, ಬೇರೆಯವರ ಕಷ್ಟಕ್ಕೆ ನೆರವಾಗುತ್ತಾ, ಅವರ ಒಳಿತಿಗಾಗಿ ಶ್ರಮಿಸುತ್ತಾ, ಬಡವರಿಗೆ ವೃದ್ಧರಿಗೆ ನೆರವಾಗುತ್ತಾ, ಹಿರಿಯರನ್ನು ಗೌರವಿಸುತ್ತಾ, ಸಮಾಜದ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ, ನಮ್ಮಿಂದ ಇತರರಿಗೆ ಉಪಕಾರ ವಾಗುವಂತೆ ಬದುಕಿದರೆ ಬದುಕು ಸಾರ್ಥಕವಾಗುತ್ತದೆ.

ನನಗೆ 10ನೇ ತರಗತಿಯಲ್ಲಿ ಒಳ್ಳೆಯ ಅಂಕ ಬಂದಿದೆ ಎಂದು ಸಂಘ ಸಂಸ್ಥೆಯು ಪುರಸ್ಕರಿಸಿದಾಗ ನನ್ನ ಹೆತ್ತವರಿಗೆ ಆದ ಸಂತೋಷವನ್ನು ಕಂಡು ಆ ಕ್ಷಣ ನನ್ನ ಬದುಕು ಸಾರ್ಥಕವಾಯಿತು ಎಂದು ಆ ವಯಸ್ಸಿನಲ್ಲಿ ಅನಿಸಿತು.

ಹಾಗೆಯೇ ನನಗೆ ನನ್ನ ಮಗಳ ನೃತ್ಯವನ್ನು ನೋಡುವುದೇ ಒಂದು ಕಣ್ಣಿಗೆ ಹಬ್ಬ. ಅವಳು ಏಳನೇ ತರಗತಿಯಲ್ಲಿ ಓದುತ್ತಿದ್ದ ಸಮಯದಲ್ಲಿ ಒಂದು ಸಮಾರಂಭ ಒಂದರಲ್ಲಿ ಭಗವಾನ್ ನಾರಾಯಣನನ್ನು ವರ್ಣಿಸುವ ಸೂರ್ಯ ಗಾಯಿತ್ರಿ ಹಾಡಿರುವ "ಶ್ರೀಮನ್ನಾರಾಯಣ ಶ್ರೀಪಾದಮೆ ಶರಣು" ಎಂಬ ಕೀರ್ತನೆಗೆ ನೃತ್ಯ ಮಾಡುವ ಅವಕಾಶ ಸಿಕ್ಕಿತು. ಅವಳ ಹಾವ ಭಾವ ನೃತ್ಯದ ಭಂಗಿಯು ಸಭಿಕರನ್ನು ಹಿಡಿದಿಡುವಂತಿತ್ತು. "ಕಮಲಾಸತಿ ಮುಖ ಕಮಲ ಕಮಲ ಹಿತ ಕಮಲಪ್ರಿಯ ಕಮಲೇಕ್ಷಣ"ಎಂಬ ಸಾಲಿಗೆ ನರ್ತಿಸುತ್ತಿರುವಾಗ ಎಲ್ಲರ ಚಪ್ಪಾಳೆಯ ಸದ್ದಿಗೆ ಕರ್ಣಾನಂದವಾಗಿ ಆನಂದ ಭಾಷ್ಪ ಸುರಿಯಿತು. ಸಭೀಕರೆಲ್ಲರೂ ಒನ್ಸ್ ಮೋರ್ ಎಂದು ಹೇಳುತ್ತಾ ಇವಳು ನಿಮ್ಮ ಮಗಳು ಬಹಳ ಚಂದ ನೃತ್ಯ ಮಾಡುತ್ತಾಳೆ ಎಂಬ ಅವರ ಮಾತನ್ನು ಕೇಳಿದಾಗ ಆದ ಸಂತೋಷ ವರ್ಣನಾತೀತ.ಆ ಕ್ಷಣ ಅವಳಿಗೆ ನೃತ್ಯವನ್ನು ಕಲಿಸಿದ್ದಕ್ಕೂ ಸಾರ್ಥಕವಾಯಿತು ಎಂದು ಅನಿಸಿತು



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಪುಟ್ಟಪರ್ತಿಯ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಸನ್ನಿಧಿ ಪ್ರಶಾಂತಿ ನಿಲಯದಲ್ಲಿ ನೃತ್ಯ ರೂಪಕ ಮಾಡಲು ಆಯ್ಕೆಯಾಗಿದ್ದಾಳೆ ಎಂದು ತಿಳಿದ ಕ್ಷಣವನ್ನು ನನ್ನ ಜೀವನ ಪರ್ಯಂತ ಮರೆಯಲಾಗುವುದಿಲ್ಲ. ನಾವು ನಂಬಿದ ದೇವರ ಸಾನ್ನಿಧ್ಯದಲ್ಲಿ ನನ್ನ ಮಗಳಿಗೆ ನೃತ್ಯ ಮಾಡುವ ಅವಕಾಶ ಒದಗಿ ಬಂದಿದ್ದು ನಮ್ಮ ಪೂರ್ವಜರ ಸುಕೃತದ ಫಲವೇ ಸರಿ. ಅಲ್ಲಿ ಅವಳ ಹಾಗೂ ಅವಳ ಸಂಗಡಿಗರ ನೃತ್ಯವನ್ನು ಮೆಚ್ಚಿ ಮೂರು ನಿಮಿಷಗಳ ಕಾಲ ತುಂಬಿದ ಪ್ರೇಕ್ಷಕರು ಹೊಡೆದ ಚಪ್ಪಾಳೆಯ ಸದ್ದು ಇನ್ನೂ ನನ್ನ ಕಿವಿಯಲ್ಲಿ ಗುಯಿ ಗುಟ್ಟುತ್ತಿದೆ. ಆ ಕ್ಷಣ ನಿಜವಾಗಿಯೂ ನಮ್ಮ ಬದುಕಿನ ಸಾರ್ಥಕ ಕ್ಷಣ ಎಂದು ಹೇಳಿದರೆ ಅತಿಶಯೋಕ್ತಿ ಆಗುವುದಿಲ್ಲ.

ಶೃಂಗೇರಿ ಶಾರದಾ ಪೀಠದ ಹಿರಿಯ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಯವರ ಸನ್ಯಾಸ ಸ್ವೀಕರಿಸಿ 50 ಸಂವತ್ಸರಗಳು ಕಳೆದ ಪ್ರಯುಕ್ತ ವೇದಾಂತ ಭಾರತೀ ಮತ್ತು ಶಾಂಕರತತ್ವ ಪ್ರಸಾರ ಅಭಿಯಾನ ಹಾಗೂ ಮಿಥಿಕ್ ಸೊಸೈಟಿಯ ಜಂಟಿ ಸಹಯೋಗದಲ್ಲಿ ಅಕ್ಟೋಬರ್ 26 ಶನಿವಾರದಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಸುವರ್ಣಭಾರತೀ ನಮಃ ಶಿವಾಯ ಸ್ತೋತ್ರ ಮಹಾಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ 1.5 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಂಡು ಧನ್ಯರಾದರು.

ಹಿಂದೂ ಧರ್ಮದ ಪುನರುತ್ಥಾನದ ಕರ್ತೃವಾದ ಜಗದ್ಗುರು ಶಂಕರಾಚಾರ್ಯರು ರಚಿಸಿದ ಅದ್ಭುತವಾದ ಸ್ತೋತ್ರಗಳಲ್ಲಿ ಮೂರು ರತ್ನಗಳಾದ ಕಲ್ಯಾಣವೃಷ್ಟಿ ಸ್ತೋತ್ರ, ಶಿವಪಂಚಾಕ್ಷರಿ ನಕ್ಷತ್ರಮಾಲಾ, ಲಕ್ಷ್ಮೀ ನೃಸಿಂಹಕರುಣಾರಸ ಸ್ತೋತ್ರ ಗಳ ಪಾರಾಯಣವನ್ನು ಶಾರದಾ ಪೀಠದ ಕಿರಿಯ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಪಠಿಸಲಾಯಿತು. ಈ ಕಾರ್ಯಕ್ರಮಕ್ಕೆ ಉಪರಾಷ್ಟ್ರಪತಿಗಳು , ಕೇಂದ್ರ ಸಚಿವರು , ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಯಡತೊರೆ ಮಠದ ಹಿರಿಯ ಹಾಗೂ ಕಿರಿಯ ಸ್ವಾಮಿಗಳು ಉಪಸ್ಥಿತರಿದ್ದರು.

ಶಿವ ಪಂಚಾಕ್ಷರಿ ಸ್ತೋತ್ರವನ್ನು ಏಕಕಾಲಕ್ಕೆ 1.5 ಲಕ್ಷ ಜನ ಏಕ ಕಂಠದಲ್ಲಿ ಪಠಿಸಿದಾಗ ಮೈ ಮನಕ್ಕೆ ಆಗುವ ಅನುಭೂತಿ ವರ್ಣಿಸಲಸದಳ. ಈ ಕಾರ್ಯಕ್ರಮದಲ್ಲಿ ಅಷ್ಟೂ ಜನರು ಸ್ತೋತ್ರ ಪಠಣ ಮಾಡಿದ್ದು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಅಲ್ಲಿ ದಾಖಲಿಸಲ್ಪಟ್ಟಿದೆ. ಈ ನಿಟ್ಟಿನಲ್ಲಿ ಅಕ್ಟೋಬರ್ 26 ಒಂದು ಐತಿಹಾಸಿಕ ದಿನವೆಂದರೆ ಅತಿಶಯೋಕ್ತಿಯಲ್ಲ.

ಸುಮಾರು ಒಂದು ಗಂಟೆಯ ಶ್ರೀ ವಿಧು ಶೇಖರ ಭಾರತೀ ಸ್ವಾಮಿಗಳಗಳ ಮಾತುಗಳು , ಅವರ ಅಸ್ಖಲಿತ ವಾಕ್ಚರಿ , ಪಾಂಡಿತ್ಯ ನಮ್ಮನ್ನು ಪರವಶಗೊಳಿಸಿತ್ತು. ಈ ಮಹಾನ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ನನ್ನ ಸುದೈವವೇ ಸರಿ. ಇದು ನನ್ನೊಬ್ಬಳ ಪ್ರಯತ್ನದಿಂದ ಸಂದದಲ್ಲ, ನನ್ನ ತಂದೆ ತಾಯಿಯ , ಅತ್ತೆ ಮಾವನವರ ಪುಣ್ಯ ಶೇಷದ ಫಲವೂ ಇರಬೇಕು ಇಲ್ಲದಿದ್ದಲ್ಲಿ ಈ ಭಕ್ತಿ ರಸದ ಸುಧೆಯ ಹೀರುವ ಸೌಭಾಗ್ಯ ಸುಮ್ಮನೆ ಒದಗಿ ಬರುವುದಿಲ್ಲ. ಸರಿ ಸುಮಾರು ಒಂದೂವರೆ ಲಕ್ಷವಿದ್ದ ಜನಸಾಗರದಲ್ಲಿ ನಾನು ಭಾಗಿಯಾಗಿದ್ದು , ಜಗದ್ಗುರುಗಳ ಆಶೀರ್ವಚನದಲ್ಲಿ ಮೀಯುವ ಸೌಭಾಗ್ಯ ನನ್ನದಾಗಿದ್ದು, ಎಲ್ಲರೂ ಸೇರಿ ಸ್ತೋತ್ರವನ್ನು ಪಠಿಸುವಾಗ ಆದ ಧನಾತ್ಮಕ ಅನುಭೂತಿಯ ಕ್ಷಣವು ನನ್ನ ಬದುಕಿನ ಅತ್ಯಂತ ಸಾರ್ಥಕ ಕ್ಷಣ.

**ಕಾಯಕವ ಚರಿಸುತ್ತ, ಮಾನಸವ ಸಯ್ತಿಡುತ ।**
**ಆಯಸಂಬಡಿಸದವೊಲಂತರಾತ್ಮನನು ॥**
**ಮಾಯೆಯೊಡನಾಡುತ್ತ, ಬೊಮ್ಮನನು ಭಜಿಸುತ್ತ ।**
**ಆಯುವನು ಸಾಗಿತೆಲೊ । ಮಂಕುತಿಮ್ಮ ॥**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಜಾಣ್ಮೆ ಬೇಕಷ್ಟೇ

ನೂರು ಜಂಜಡಗಳಾಚೆ
ಸಂತೃಪ್ತಿಯೊಂದಿದೆ
ಅದನುಡುಕುವ ವ್ಯವಧಾನ ಬೇಕಷ್ಟೇ....

ಹಲವು ಬವಣೆಗಳಾಚೆ
ಬದುಕಿಗೊಂದು ಅರ್ಥವಿದೆ
ಅದ ಕಟ್ಟಿಕೊಳ್ಳುವ ಜಾಣ್ಮೆ ಬೇಕಷ್ಟೇ....

ಸಾವಿರ ಸಾಮಾನ್ಯರ ನಡುವೆ
ನೀವೊಬ್ಬ ಅಸಮಾನ್ಯರೆನಿಸಿಬಿಡಬಹುದು
ಆ ಹಾದಿಯಲಿ ಸಾಗಬೇಕಷ್ಟೆ.....

ಸಾವಿರ ಕೊಂಕುಗಳ ನಡುವೆ
ಪ್ರೇಮಾಂಕರವೊಂದಿದೆ
ಅದ ಪೋಷಿಸುವ ಮನಸು ಬೇಕಷ್ಟೇ....

ನಾನು ನಾನೆಂಬ ನಗಣ್ಯದಾಚೆ
ನಾವೇ ನಾನೆಂಬ ಜ್ಞಾನವೊಂದಿದೆ
ಅದರೊಳು ನಾವು ಮಿಂದೇಳಬೇಕಷ್ಟೇ ....

– ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ

### ಅದೃಷ್ಟ

ಸಹಿಸುತ ಎಲ್ಲವ ಕಷ್ಟ
ಮರೆಯುವ ಆಗಿಹ ನಷ್ಟ
ಗುರಿಯಿರಲಿ ಮನಸಲಿ ಸ್ಪಷ್ಟ
ಪ್ರಯತ್ನಕೇ ಒಲಿವುದು ಅದೃಷ್ಟ

ಜೀವನ ಏಳುಬೀಳಿನ ಹಾದಿ
ಶಾಶ್ವತವಲ್ಲ ಯಶಸ್ಸಿನ ಗಾದಿ
ಧೃಢನಿಶ್ಚಯಕೆ ಒಲಿವುದು ಸಿದ್ಧಿ
ಸಾಧನೆಯೇ ಗೆಲುವಿಗೆ ಬುನಾದಿ

ವಿಶ್ವಾಸವ ಬಿಡದಿರು ಮನುಜ
ಸೋಲು ನಿರಾಶೆ ಸಹಜ
ಬದುಕಾಗಲಿ ಉತ್ಸಾಹದ ಕಣಜ
ಹಾರಾಡಲಿ ಕೀರ್ತಿಯ ಧ್ವಜ

~ ಚೇತನ ಭಾರ್ಗವ,ಬೆಂಗಳೂರು

# ಮಕ್ಕಳ ಕಲಿಕೆಗೆ ಚಟುವಟಿಕೆ ನೀಡಿ

## ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ। ಬಾಲಮೇಳ ಕಾರ್ಯಕ್ರಮ



**ಹಂಪಿ ಟೈಮ್ಸ್ ಕೊಪ್ಪಳ**

ಮನೆಗಳಲ್ಲಿ ಪೋಷಕರು ಮಕ್ಕಳಿಗೆ ಮೊಬೈಲ್ ಕೊಡುವ ಬದಲಿಗೆ ಸಣ್ಣ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಹಾಗೂ ಕಲಿಕೆ ಟಾಟಾ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿಯಲ್ಲಿ ಯಲಬುರ್ಗಾ ಯೋಜನೆಯ ತಳಕಲ್ ಗ್ರಾಮದ ಸಮುದಾಯ ಭವನದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾದ ಅಂಗನವಾಡಿ ಮಕ್ಕಳ "ಬಾಲಮೇಳ ಕಾರ್ಯಕ್ರಮ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ನಡೆಯುತ್ತಿರುವ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮ ಮಾದರಿಯಾಗಿದ್ದು, ಪತ್ಯ ಕ್ರಮದಂತೆ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಕಾರ್ಯಕ್ರಮದ ವಿಕ್ಷಣೆಗಾಗಿ 6 ರಾಜ್ಯಗಳಿಂದ ಅಧಿಕಾರಿಗಳು ವಿಕ್ಷಣೆಮಾಡಿದ್ದು, 2024–25ನೇ ಸಾಲಿನಲ್ಲಿ ರಾಷ್ಟ್ರೀಯ ನೆಕ್ಸಸ್ ಪ್ರಶಸ್ತಿ ಲಭಿಸಿರುತ್ತದೆ. "ಪೋಷಕರ ನಡೆ ಅಂಗನವಾಡಿಯ ಕಡೆ" ಸಭೆಗಳು ಮತ್ತು "ಹಲೋ ಪೋಷಕರೇ" ಇಂತಹ ವಿನೂತನ ಕಾರ್ಯಕ್ರಮಗಳನ್ನು ಅಂಗನವಾಡಿ ಮಕ್ಕಳ ಪೋಷಕರಿಗಾಗಿ ಮಾಡಲಾಗುತ್ತಿದ್ದು, ಬಾಲ ಮೇಳ ಕಾರ್ಯಕ್ರಮ ಮಕ್ಕಳ ಕಲಿಕೆ ಮತ್ತು ಪ್ರತಿಭೆಯನ್ನು ಪರದರ್ಶಿಸಲು ಉತ್ತಮ ವೇದಿಕೆಯಾಗಿದೆ ಎಂದರು.

ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪಿ.ವಾಯ್.ಶೇಟ್ಟಪ್ಪನವರ್ ಮಾತನಾಡಿ, ಅಂಗನವಾಡಿಯ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶಾಲಾ ಪೂರ್ವ ಶಿಕ್ಷಣ ಸಹಕಾರಿಯಾಗಿದೆ. ಮಕ್ಕಳ ಆರೋಗ್ಯ ಹಾಗೂ ಪೌಷ್ಠಿಕ ಆಹಾರ ನೀಡುವುದು ಅತ್ಯವಶ್ಯಕವಾಗಿದೆ. ಮಕ್ಕಳ ಕಲಿಕೆಗೆ ಶಾಲಾ ಪೂರ್ವ ಶಿಕ್ಷಣ ಸಹಕಾರಿಯಾಗಿದೆ. ಚಟುವಟಿಕೆ ಮೂಲಕ ಶಿಕ್ಷಣ ನೀಡುವದರಿಂದ ಮಕ್ಕಳ ಕಲಿಕೆ ಸುಲಭವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಜಹೀರಾ ಬೇಗಂ ಹಾಗೂ ಗ್ರಾ.ಪಂ ಉಪಾಧ್ಯಕ್ಷರು, ಸರ್ವಸದ್ಯರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಮೇಲ್ವಿಚಾರಕರು, >>4

# ಆರೋಗ್ಯಕರ ಜೀವನಕ್ಕೆ ಅಡಿಪಾಯ ಯೋಗ–ಆಯುರ್ವೇದ


**ಮೊದಲ ಪುಟದಿಂದ**

ಕಾರ್ಯಕ್ರಮವನ್ನು ಉದ್ಘಾಟಿಸಿ ಸೋಮವಾರ ಮಾತನಾಡಿದರು. ಯುವಕರು ವಾಸ್ತವದಲ್ಲಿ ಯೋಗ ಮತ್ತು ಆಯುರ್ವೇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿದೆ. ಆಯು ಎಂದರೆ ಜೀವನ, ವೇದ ಎಂದರೆ ಜ್ಞಾನ, ಜೀವನ ಜ್ಞಾನವನ್ನು ಆರ್ಯುವೇದ ಎಂದು ಕರೆಯಲಾಗುತ್ತದೆ. ಈ ವಿಜ್ಞಾನವು ಅನೇಕ ಜೀವನಶೈಲಿ ಮಾದರಿಯನ್ನು ಪರಿಚಯಿಸುತ್ತದೆ. ದೇಹದ ಸ್ವರೂಪಗಳನ್ನು ಅರ್ಥಮಾಡಿಕೊಳ್ಳಲು ಯೋಗ ಸಹಕಾರಿಯಾಗಿದೆ. ಔಷಧಿಗಳ ಸಹಾಯವಿಲ್ಲದೇ, ಸೂಕ್ತ ಆಹಾರ ಮತ್ತು ಜೀವನಶೈಲಿಯನ್ನು ಅನುಸರಿಸುವ ಮೂಲಕ ರೋಗವನ್ನು ತೊಡೆದು ಹಾಕಬಹುದು. ಆದರೆ ಆಹಾರ ಮತ್ತು ದಿನಚರಿಯ ಅಂಶವನ್ನು ನಿರ್ಲಕ್ಷಿಸಿದರೆ ಸರಿಯಾದ ಔಷಧಿಗಳಿಂದಲೂ ಚಿಕಿತ್ಸೆ ಸಾಧ್ಯವಿಲ್ಲ. ನಾವು ತಿನ್ನುವ ಆಹಾರವು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶಾಷೂ ಮೈನುದ್ದಿನ್ ಮಾತನಾಡಿ, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಸಂರಕ್ಷಣೆಯಲ್ಲಿ ಯೋಗಾಭ್ಯಾಸದ ಮಹತ್ವ ಹೆಚ್ಚಿದೆ. ವಿದ್ಯಾರ್ಥಿಗಳ ಜೀವನಕ್ಕೆ ಬಹು ಅವಶ್ಯಕವಾಗಿರುವ ಯೋಗವನ್ನು ಆಯುಷ್ ಇಲಾಖೆಯವರು ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ನಿತ್ಯ ಯೋಗಾಭ್ಯಾಸ ಮತ್ತು ಪ್ರಾಣಾಯಾಮಗಳಿಂದ ಆಂತರಿಕ ಮತ್ತು ಬಾಹ್ಯ ಸೌಂದರ್ಯ ವೃದ್ಧಿಯಾಗಲಿದೆ ಎಂದರು.

ಬಳಿಕ ವಿದ್ಯಾರ್ಥಿಗಳಿಗೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಇಮ್ಯೂನಿಟಿ ಬೂಸ್ಟರ್, ಜ್ಞಾಪಕ ಶಕ್ತಿಯನ್ನು ವೃದ್ಧಿಸುವ ಮೆಮರಿ ಬೂಸ್ಟರ್, ಹೇರ್ ಆಯಿಲ್ ಮತ್ತು ಇತ್ಯಾದಿ ಔಷಧಗಳನ್ನು ಹಾಗೂ ಯೋಗ ಕುರಿತಾದ ಕಿರು ಕೈಪಿಡಿಗಳನ್ನು ವಿತರಿಸಲಾಯಿತು. ಮುಖ್ಯ ವೈದ್ಯಾಧಿಕಾರಿಗಳಾದ ಡಾ.ಕೆ.ಹೆಚ್.ಗುರುಬಸವರಾಜ್ ಆರೋಗ್ಯಕರ ಜೀವನ ಶೈಲಿಯ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ವೈದ್ಯೆ ಡಾ.ಹಾಲಮ್ಮ ಆಯುಷ್ ಕಿಟ್‌ನಲ್ಲಿರುವ ಔಷಧಿಗಳ ಬಳಕೆಯ ವಿಧಾನವನ್ನು ತಿಳಿಸಿದರು.

ಈ ವೇಳೆ ಡಾ.ಉಮಾ ಪಾಟೀಲ್, ಡಾ.ಭೀಮನಗೌಡ ಸಾವಜಿ, ಡಾ.ಯಶ್ವಂತ್, ಡಾ.ಶ್ವೇತಾ, ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ಕಳಕಪ್ಪ, ಆಯುಷ್ ಸಿಬ್ಬಂದಿಗಳಾದ ವೆಂಕಟೇಶ್, ಬಸವರಾಜ್, ಪವನ್, ಯೋಗ ತರಬೇತುದಾರ ಮರಿಯಜ್ಜ ಇತರರಿದ್ದರು.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 21–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1620.63 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11239 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 63.114 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.88 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.120 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

22–01–2025 – ಬುಧವಾರ

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಸ್ವಾತಿ |
| ಯೋಗ | : ಶೂಲ |
| ಕರಣ | : ಕೌಳವ |
| ಸೂರ್ಯೋದಯ | : 07:10:59 |
| ಸೂರ್ಯಾಸ್ತ | : 18:06:21 |
| ರಾಹು ಕಾಲ | : 12:39–14:01 |
| ಯಮಘಂಡ ಕಾಲ | : 08:33–09:55 |
| ಗುಳಿಕ ಕಾಲ | : 11:17–12:39 |

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಎಸ್‌ಎಸ್‌ಎಲ್‌ಸಿ ವಿಜ್ಞಾನ ಚಿತ್ರಸ್ಪರ್ಧೆ–8ರಲ್ಲಿ ಭಾಗವಹಿಸಿ ಆಯಾ ಶಾಲೆಯ ದಿ ಬೆಸ್ಟ್ ಚಿತ್ರ ಬಿಡಿಸಿದ ವಿದ್ಯಾರ್ಥಿಗಳ ವಿವರ



**ಹೊಸಪೇಟೆ ತಾಲ್ಲೂಕು**

1. **ಸಂಜನಾ**
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ ಮರಿಯಮ್ಮನಹಳ್ಳಿ
ಶಿಕ್ಷಕರು–ಜಾಕೀರ್ ಹುಸೇನ್
2. **S K ನಿಖಿತಾ**
ರಾಣಿ ಚೆನ್ನಮ್ಮ ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು– ಸಿಂಧುಜಾ
3. **ವಾಜೀದ್ B**
ಬಿ ಆರ್ ಆರ್ ಜಿ ಪ್ರೌಢಶಾಲೆ
ಜಿ ನಾಗಲಾಪುರ
ಶಿಕ್ಷಕರು–ಚನ್ನಬಸಪ್ಪ K B
4. **H ಸಹನಾ**
ಸರ್ಕಾರಿ ಪ್ರೌಢಶಾಲೆ, ಡಣಾಪುರ
ಶಿಕ್ಷಕರು– ಸಂಧ್ಯಾ ಸೌಜನ್ಯ
5. **ಫೈರೋಜ್**
ಸರ್ಕಾರಿ ಪದವಿಪೂರ್ವ ಕಾಲೇಜ್ (ಪ್ರೌಢಶಾಲಾ ವಿಭಾಗ), ಕಮಲಾಪುರ
ಶಿಕ್ಷಕರು–ಅಸ್ಮಾ ತರನ್ನುಂ/ನೆಮ್ಯ ನಾಯ್ಕ
6. **ಎನ್.ವೈ ವಿನೋದಕುಮಾರ**
ಸರ್ಕಾರಿ ಪ್ರೌಢಶಾಲೆ, ಕಾರಿಗನೂರು
ಶಿಕ್ಷಕಿಯ ಹೆಸರು–ನಾಗವೇಣಿ ಡಿ
7. **T ರೇವತಿ**
ಸರ್ಕಾರಿ ಪ್ರೌಢಶಾಲೆ,
ಅನಂತಶಯನ ಗುಡಿ
ಶಿಕ್ಷಕರು–ಗಂಗಮ್ಮ
8. **M ರಜಿಯಾ ಸುಲ್ತಾನ್**
ಸರ್ಕಾರಿ ಸಂಯುಕ್ತ ಬಾಲಕಿಯರ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ
ಶಿಕ್ಷಕರು–ಶಿವಮ್ಮ
9. **ಗಂಗಮ್ಮ ಜಗಲಿ**
ಸರ್ಕಾರಿ ಪ್ರೌಢಶಾಲೆ, ಮಲಪನ ಗುಡಿ
ಶಿಕ್ಷಕರು–ಅನಿತಾ A V
10. **N ಯುವರಾಜ**
ಪಿ.ವಿ.ಎಸ್.ಬಿ.ಸಿ.ಪ್ರೌ. ಶಾಲೆ, ಹೊಸಪೇಟೆ
ಶಿಕ್ಷಕರು– ಜಯಪ್ರಭು/ ಊ ಶಕುಂತಲಾ
11. **ಗಣೇಶ K**
ಸರ್ದಾರ್ ಪಾಟೀಲ್ ಸ.ಪ್ರೌ ಶಾಲೆ
ಹೊಸಪೇಟ, ಶಿಕ್ಷಕರು–
12. **ಪ್ರಶಾಂತ ಕುಮಾರ**
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ
13. **ಶ್ರೀಕಾಂತ್ M**
ಮುನ್ಸಿಪಲ್ ಪ್ರೌಢಶಾಲೆ
ಚಿತ್ತವಾಡಗಿ, ಹೊಸಪೇಟೆ
ಶಿಕ್ಷಕರು– ಎ ಎಂ ವರಲಕ್ಷ್ಮಿ
14. **ಜಿ.ವಿ. ಮಾನಸ**
ಸರ್ಕಾರಿ ಪ್ರೌಢಶಾಲೆ, ಕಾಕುಬಾಳು
ಶಿಕ್ಷಕರು– ಶಶಿಧರ ಪಿ.ಎಂ
15. **M G ರಾಮಾಂಜಿನಿ**
ಸರ್ಕಾರಿ ಪ್ರೌಢಶಾಲೆ, ಹಂಪಿನಕಟ್ಟಿ
ಶಿಕ್ಷಕರು– ಪ್ರಶಾಂತ್

**ಹಗರಿಬೊಮ್ಮನಹಳ್ಳಿ ತಾಲೂಕು**

1. **ನಿಶ್ಚಿತಾ P**
P.K.M ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ
2. **ಸುಧಾ ಬಿ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್
3. **ಸಂಗೀತಾ B**
ಕೆ. ಪಿ. ಸರ್ಕಾರಿ ಪ್ರೌಢಶಾಲೆ, ಹಳೆ ಹಗರಿಬೊಮ್ಮನಹಳ್ಳಿ
ಶಿಕ್ಷಕರು–ಮುದ್ದಮ್ಮ
4. **K ಶ್ರೀದೇವಿ**
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ
5. **ಅಕ್ಷತಾ K V**
ಕೌದಿ ಮಹಂತೇಶ್ವರ ಪ್ರೌಢಶಾಲೆ,
ಬಾಚಿಗೊಂಡನಹಳ್ಳಿ
ಶಿಕ್ಷಕರು– ಪ್ರಕಾಶಪ್ಪ V
6. **ಕೆ.ಸಂಜನ**
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್
7. **ಕೆ. ಸಂಗೀತ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ,
ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ
8. **H ಮಾನಸ**
K.P.G ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು – J ರಾಜೇಶ್ವರಿ
9. **B. ಭಾಗ್ಯಮ್ಮ**
S.G.B. ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ S C
10. **ಪಿ. ಚಂದನ**
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್
11. **ಪಿ. ಸಹನ**
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

**ಕೊಟ್ಟೂರು ತಾಲೂಕು**

1. **ಸಂಪತ್ ಲಕ್ಷ್ಮಿ**
M.D.R.S ಅಂಬಳಿ
ಶಿಕ್ಷಕರು–ಕೊಟ್ರೇಶ ನಾಯ್ಕ

**ಹರಪನಹಳ್ಳಿ ತಾಲೂಕು**

1. **K ಮಧು**
ಸರ್ಕಾರಿ ಪ್ರೌಢಶಾಲೆ, ಹಗರಿ ಗಜಾಪುರ
ಶಿಕ್ಷಕರು–ಲಲಿತಾ ಮಾಮನಿ
2. **B. S ಮನು**
ಸರ್ಕಾರಿ ಪ್ರೌಢಶಾಲೆ, ಕಡಬಗೆರೆ
ಶಿಕ್ಷಕರು– ಸೋಮಪ್ಪ ಬಿ ನೀಲೊಗೊಳ

**ಗದಗ ಜಿಲ್ಲೆ**

1. **ಅನ್ನಪೂರ್ಣ ಬೇವಿನಮರದ**
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ
ರೋಣ ತಾ. ಗದಗ ಜಿ.
ಶಿಕ್ಷಕರು– M.V ಪ್ರಕಾಶಾರಾಧ್ಯ

**ಶಿವಮೊಗ್ಗ ಜಿಲ್ಲೆ**

1. **ಇಂದ್ರಜಿತ್**
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ,
ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು– ಎಂ.ಜಿ ಮಂಜುನಾಥ

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 58 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೆ ಶಿಲ್ಪಿ — ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

## ಇಂದೆ ಬಿಡಿಸಿ ಉತ್ತಮ ಅಂಕ ಗಳಿಸಿ

### ಮಾದರಿ ಪ್ರಶ್ನೆ ಪತ್ರಿಕೆ 1

**ಅಂಕಗಳು : 40** **ಸಮಯ : 90ನಿಮಿಷ**


**I. ಒಂದು ಅಂಕದ ಪ್ರಶ್ನೆಗಳು: 7 X 1 = 7**

1) a ಮತ್ತು b ಗಳು ಎರಡು ಧನಪೂರ್ಣಾಂಕಗಳಾದಾಗ ಮ.ಸಾ.ಅ(a b)ಮತ್ತು ಲ.ಸಾ.ಅ.(ab) ಗಳಿಗಿರುವ ಸರಿಯಾದ ಸಂಬಂಧ ಬರೆಯಿರಿ.

2) $x + 2y - 4 = 0$ ಮತ್ತು $2x + 4y - 12$ ಜೋಡಿ ರೇಖೆಗಳನ್ನು ಪ್ರತಿನಿಧಿಸಿದಾಗ ಎಂಥಹ ರೇಖೆಗಳಾಗಿರುತ್ತವೆ?

3) $2x^2 = x - 7$ ವರ್ಗ ಸಮೀಕರಣದ ಆದರ್ಶ ರೂಪದಲ್ಲಿ ಬರೆಯಿರಿ.

4) ಕೊಟ್ಟಿರುವ ಚಿತ್ರದಲ್ಲಿ sine ಬೆಲೆ ಕಂಡುಹಿಡಿಯಿರಿ



5) x ಅಕ್ಷದಿಂದ (5,6) ಬಿಂದುವಿಗೆ ಇರುವ ದೂರವೇನು?

6) ಒಂದು ಸಮಾಂತರ ಶ್ರೇಢಿಯ ಮೊದಲನೇ ಪದ a ಮತ್ತು ಕೊನೆಯ ಪದಗಳು l ಆದಾಗ ಮೊದಲ n ಪದಗಳ ಮೊತ್ತವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ.

7) ಖಚಿತ ಘಟನೆಯ ಸಂಭವನೀಯತೆ ಬರೆಯಿರಿ.

**II ಕೆಳಗಿನವುಗಳಿಗೆ ಉತ್ತರಿಸಿ: 3X2=6**

8) $2x+y=8$ ಮತ್ತು $x-y = 5$ ಈ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ವರ್ಜಿಸುವ ವಿಧಾನದಿಂದ ಬಿಡಿಸಿ

9) $x^2+bx+9$ ಈ ವರ್ಗ ಸಮೀಕರಣವು ಎರಡು ಸಮನಾದ ವಾಸ್ತವ ಮೂಲಗಳನ್ನು ಹೊಂದಿದ್ದರೆ b ಬೆಲೆಯನ್ನು ಕಂಡುಹಿಡಿಯಿರಿ.

10) 4. 7. 10.. ಈ ಸಮಾಂತರ ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.

**ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಜಿಲ್ಲಾಮಟ್ಟದ ಪೂರ್ವಸಿದ್ಧತಾ ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆ ಬಿಡಿಸಿ, ನಿಮ್ಮ ಶಿಕ್ಷಕರಿಗೆ ತೋರಿಸಿ**

**III ಕೆಳಗಿನವುಗಳಿಗೆ ಉತ್ತರಿಸಿ: 5X3=15**

11. $\sqrt{5}$ ಒಂದು ಅಭಾಗಲ್ಲ ಸಂಖ್ಯೆ ಎಂದು ಸಾಧಿಸಿ.

12) $P(x)= x^2-5x+k$ ಈ ಬಹುಪದೋಕ್ತಿಯ ಒಂದು ಶೂನ್ಯತೆಯು ಅದರ ಮತ್ತೊಂದು ಶೂನ್ಯತೆಗಿಂತ 1 ಹೆಚ್ಚಾಗಿದೆ.ಹಾಗಾದರೆ k ಯ ಬೆಲೆಯನ್ನು ಕಂಡುಹಿಯಿರಿ.

13) ಒಂದು ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 6ಮೀ ಹೆಚ್ಚಾಗಿದೆ. ತ್ರಿಭುಜದ ವಿಸ್ತೀರ್ಣವು 108ಚ.ಮೀ ಆದಾಗ ಆ ತ್ರಿಭುಜದ ಪಾದ ಮತ್ತು ಎತ್ತರಗಳನ್ನು ಕಂಡುಹಿಡಿಯಿರಿ.

14) ತ್ರಿಭುಜ PQR ಯು PQ ಮತ್ತು PR ಬಾಹುಗಳನ್ನು ಕ್ರಮವಾಗಿ M ಮತ್ತು N ಬಿಂದುಗಳಲ್ಲಿ ಛೇದಿಸುವ ರೇಖೆಯು QR ಗೆ ಸಮಾಂತರವಾಗಿದ್ದರೆ $\frac{PM}{PQ} = \frac{PN}{PR}$ ಎಂದು ಸಾಧಿಸಿ.

15) P(x, y) ಬಿಂದುವು A(7, 1) ಮತ್ತು B(3, 5) ಬಿಂದುಗಳಿಂದ ಸಮಾನ ದೂರದಲ್ಲಿದ್ದರೆ x ಮತ್ತು y ಗಳ ನಡುವೆ ಒಂದು ಸಂಬಂಧವನ್ನು ಕಂಡುಹಿಡಿಯಿರಿ. A,P ಹಾಗು B ಮತ್ತು ಬಿಂದುಗಳು ಸರಳರೇಖಾಗತವಾಗಿದ್ದರೆ P ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

**IV. ಕೆಳಗಿನವುಗಳಿಗೆ ಉತ್ತರಿಸಿ 4X3=12**

16) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಯ ಪರಿಹಾರವನ್ನು ನಕ್ಷಾವಿಧಾನದಿಂದ ಕಂಡುಹಿಡಿಯಿರಿ.
$x + y = 5$ ಮತ್ತು $2x + y = 8$

17) ಒಂದು ಸಮಾಂತರ ಶ್ರೇಢಿಯ 8ನೇ ಪದವು ಅದರ 2ನೇ ಪದದ ಅರ್ಧದಷ್ಟಿದೆ. ಮತ್ತು 11 ನೇ ಪದವು 4ನೇ ಪದದ ಮೂರನೇ ಒಂದರಷ್ಟಕ್ಕಿಂತ ಒಂದು ಹೆಚ್ಚಾಗಿದೆ. ಹಾಗಾದರೆ ಆ ಸಮಾಂತರ ಶ್ರೇಢಿಯ 15 ನೇ ಪದ ಕಂಡುಹಿಡಿಯಿರಿ.

18) "ತಿಭುಜದ ಒಂದು ಕೋನವು ಮತ್ತೊಂದು ತ್ರಿಭುಜದ ಒಂದು ಕೋನಕ್ಕೆ ಸಮವಾಗಿದ್ದು ಆ ಕೋನಗಳನ್ನು ಉಂಟುಮಾಡಿರುವ ಬಾಹುಗಳು ಸಮಾನುಪಾತದಲ್ಲಿದ್ದರೆ ಆ ಎರಡೂ ತ್ರಿಭುಜಗಳು ಸಮರುಪಿಗಳಾಗಿರುತ್ತವೆ" ಎಂದು ಸಾಧಿಸಿ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

**ಮೈಕ್ರೋ ನ್ಯೂಸ್**

## ಉಚಿತ ಹೊಲಿಗೆ ಯಂತ್ರ ಗ್ರಾಮೀಣ ಮಹಿಳೆಯರಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಉಚಿತವಾಗಿ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ ಎಂದು ಗ್ರಾಮೀಣ ಕೈಗಾರಿಕೆ ಉಪನಿರ್ದೇಶಕ ಕೆ.ಜಿ.ಮಹಾಂತೇಶ್ ಕಂಚಿಮಠ ತಿಳಿಸಿದ್ದಾರೆ.

ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ http://vijayanagara.nic.in ವೆಬ್‌ಸೈಟ್‌ಮುಖಾಂತರಅರ್ಜಿಸಲ್ಲಿಸಬಹುದು. ಅರ್ಜಿಸಲ್ಲಿಸಲು ಜ.17 ರಿಂದ ಫೆ.16 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಗ್ರಾಮೀಣ ಕೈಗಾರಿಕೆ ಕಚೇರಿ, ಜಿಲ್ಲಾ ಪಂಚಾಯತ್, ಹೊಸಪೇಟೆ ರಸ್ತೆ ಬಳ್ಳಾರಿ ಮತ್ತು ಕೈಗಾರಿಕಾ ವಿಸ್ತರಣಾಧಿಕಾರಿಗಳು ಹೊಸಪೇಟೆ ಮತ್ತು ಹಗರಿಬೊಮ್ಮನಹಳ್ಳಿ – 9035547140, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ಕೊಟ್ಟೂರು– 9844200579 ಸಂಖ್ಯೆಗಳಿಗೆ ಕರೆ ಮಾಡಿ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ಮಕ್ಕಳ ಕಲಿಕೆಗೆ ಚಟುವಟಿಕೆ ನೀಡಿ

ಮೂರನೆ ಪುಟದಿಂದ

ಕಲಿಕೆ ಟಾಟಾ ಟ್ರಸ್ಟ್ಸ್ ಜಿಲ್ಲಾ ವ್ಯವಸ್ಥಾಪಕರು ಹಾಗೂ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಭಾಗವಹಿಸಿದರು.

**ಸ್ಟಾಲ್ ಉದ್ಘಾಟನೆ:** ಅಂಗನವಾಡಿ ಮಕ್ಕಳ ಜೊತೆಗೆ ಜಿಲ್ಲಾಧಿಕಾರಿಗಳು, ಶಾಲಾ ಪೂರ್ವ ಶಿಕ್ಷಣ ಸ್ಟಾಲ್ ಉದ್ಘಾಟನೆ ಮಾಡಿ, "ಬಾಲಮೇಳ"ಕಾರ್ಯಕ್ರಮದಲ್ಲಿ ಅಂಗನವಾಡಿ ಮಕ್ಕಳು ಅಂಗನವಾಡಿಯಲ್ಲಿ ನಡೆಯುವ ಶಾಲಾಪೂರ್ವ ಶಿಕ್ಷಣದ ಚಟುವಟಿಕೆಗಳಾದ ಅಂಗನವಾಡಿಯ ನಿಯಮಗಳು, ಆಕಾರಗಳ ಪರಿಚಯ, ಬಣ್ಣಗಳ ಪರಿಚಯ, ಇಂದಿನ ಕ್ಯಾಲೆಂಡರ್ ಚಟುವಟಿಕೆಗಳ ಪ್ರದರ್ಶನವನ್ನು ವೀಕ್ಷಿಸಿದರು. ಬಳಿಕ ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು ಎಂಬ ಹಾಡಿಗೆ ಮಕ್ಕಳೊಂದಿಗೆ ಜಿಲ್ಲಾಧಿಕಾರಿಗಳು ನೃತ್ಯ ಮಾಡಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ 10 ಅಂಗನವಾಡಿಗಳ 3 ರಿಂದ 6 ವರ್ಷದ ಮಕ್ಕಳು ಹಾಗೂ ಮಕ್ಕಳ ತಂದೆ ತಾಯಂದಿರು ಸಾರ್ವಜನಿಕರು ಭಾಗವಹಿಸಿದರು ಅಂಗನವಾಡಿ ಕೇಂದ್ರದಲ್ಲಿ ಶಾಲಾ ಪೂರ್ವ ಶಿಕ್ಷಣದಲ್ಲಿ ಕಲಿತಿರುವ ವಿಷಯವನ್ನು ಮಕ್ಕಳ ಸಾಮರ್ಥ್ಯವನ್ನು ಬಾಲಮೇಳ ಕಾರ್ಯಕ್ರಮದ ವೇದಿಕೆ ಮೇಲೆ ಪ್ರದರ್ಶಿಸಿ ಪಾಲಕರಿಂದ ಪ್ರೋತ್ಸಾಹಿಸುವ ಅತ್ಯುತ್ತಮ ಕಾರ್ಯಕ್ರಮವಾಗಿ ಜನಮೆಚ್ಚುಗೆ ಗಳಿಸಿತು 400 ರಿಂದ 500 ಪಾಲಕರು ಭಾಗವಹಿಸಿದ್ದರು.

ಬಾಲಮೇಳ ಕಾರ್ಯಕ್ರಮದ ನಿಮಿತ್ಯ ಪಾಕರಿಗೆ ಆಟಗಳನ್ನು ಆಡಿಸಲಾಯಿತು, ಶಾಲಾ ಪೂರ್ವ ಶಿಕ್ಷಣ ಸ್ಟಾಲ್, ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ವೇಷ ಬೂಷಣ ಹಾಗೂ ಮಕ್ಕಳು ಅಂಗನವಾಡಿಯಲ್ಲಿ ಕಲಿತ ಚಟುವಟಿಕೆಗಳನ್ನು ಪ್ರಸ್ತುತ ಪಡಿಸುವಿಕೆ ಸೇರಿದಂತೆ ಇತರ ಕಾರ್ಯಕ್ರಮಗಳು ನಡೆದವು.

# ಆದರ್ಶಗಳನ್ನು ಅಳವಡಿಸಿಕೊಂಡಾಗ ಆಚರಣೆಗಳು ಅರ್ಥಪೂರ್ಣ ಎನಿಸುತ್ತವೆ

### ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಹೇಳಿಕೆ । ನಿಜಶರಣ ಅಂಬಿಗರ ಚೌಡಯ್ಯ ಜಯಂತಿ

**ಹಂಪಿ ಟೈಮ್ಸ್ ಹೊಸಪೇಟೆ**

ನಿಜಶರಣ ಅಂಬಿಗರ ಚೌಡಯ್ಯನವರ ವಿಮರ್ಶಾತ್ಮಕ ವಚನಗಳು ಇಂದಿಗೂ ಸಕಾಲಿಕ ವಾಗಿವೆ. ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಂಗಳವಾರ ಅವರು ಮಾತನಾಡಿದರು, ಹಿಂದುಳಿದ ವರ್ಗ, ದಲಿತರು, ದಮನಿತ, ಶೋಷಿತ ವರ್ಗಗಳ ಪ್ರಗತಿಯನ್ನು ಪರಮಾರ್ಥಿಕವಾಗಿ ವಚನಗಳ ಮೂಲಕ ಸಾರಿದವರು ಅಂಬಿಗರ ಚೌಡಯ್ಯನವರು ಇವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳುವ ಮೂಲಕ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸ ಬೇಕಿದೆ. ಗಂಗಮತಸ್ಥ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಖ್ಯವಾಹಿನಿಗೆ ಬರಲು ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದರು.



ಶಿಕ್ಷಕ ಬಿ.ಕೊಟ್ರಪ್ಪ ಉಪನ್ಯಾಸ ನೀಡಿ ಅವರು ಮಾತನಾಡಿ, ವಿಮರ್ಶಾತ್ಮಕ ವಚನಕಾರ ನಿಜಶರಣ ಅಂಬಿಗರ ಚೌಡಯ್ಯ. ನೇರ, ನಿಷ್ಠುರವಾಗಿ ಸಮಾಜದಲ್ಲಿರುವ ಅಸಮಾನತೆಯನ್ನು ತೀಕ್ಷ್ಣವಾಗಿ ಟೀಕಿಸಿದವರು. ತಪ್ಪುಗಳನ್ನು ಸಹಿಸದೇ ತನ್ನ ವಚನಗಳ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದರು. ಅಣ್ಣ ಬಸವಣ್ಣನವರ ಪ್ರಿಯವಾದ ವ್ಯಕ್ತಿ ಮತ್ತು ವ್ಯಕ್ತಿತ್ವ ಇವರದ್ದಾಗಿತ್ತು. ಅಹಂಕಾರ, ಶೋಷಣೆ, ದೌರ್ಜನ್ಯಗಳನ್ನು ಪ್ರಖರವಾಗಿ ಟೀಕಿಸಿ ಸಮಸಮಾಜದ ನಿರ್ಮಾಣದ ಕನಸು ಕಂಡಿದ್ದ ಅಂಬಿಗರ ಚೌಡಯ್ಯನವರನ್ನು ಇಂದಿಗೂ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳುವ ಕೆಲಸವಾಗಬೇಕಿದೆ. ಸರ್ವ ಸಮಾಜಗಳ ಸಂಘಟಿತ ಬದುಕು ನಿರ್ವಹಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದ ಚೌಡಯ್ಯನವರು ಸ್ಮರಣೆ ಅಗತ್ಯವಾಗಿದೆ ಎಂದರು.

ಅಂಬಿಗರ ಸಮಾಜದ ಜಿಲ್ಲಾಧ್ಯಕ್ಷ ಅಂಬಾಡಿ ನಾಗರಾಜ್ ಮಾತನಾಡಿ, ಶೇಷ್ಟ ವಚನಕಾರರಲ್ಲಿ ಅಂಬಿಗರ ಚೌಡಯ್ಯ ಅಗ್ರಗಣ್ಯರಾಗಿದ್ದು, ಸಾವಿರಕ್ಕೂ ಹೆಚ್ಚು ವಚನಗಳನ್ನೂ ರಚಿಸಿದ್ದಾರೆಂದು ಅಂದಾಜಿಸ ಬಹುದಾಗಿದೆ. ಅವರ 350 ಕ್ಕೂ ಹೆಚ್ಚು ವಚನಗಳನ್ನು ದಾಖಲಿಸಲಾಗಿದೆ. ಅಂಬಿಗರ ಸಮುದಾಯ ಚೌಡಯ್ಯರಂತೆ ವ್ಯಾಸ ಮಹರ್ಷಿಗಳ ಸ್ಮರಿಸುವ ಅಗತ್ಯವಿದೆ. ಮುಂದಿನ ದಿನಗಳಲ್ಲಿ ವ್ಯಾಸ ಮಹರ್ಷಿಗಳ ಜಯಂತಿಯನ್ನು ಆಚರಿಸಬೇಕಿದೆ ಎಂದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರು, ತಹಸೀಲ್ದಾರ ಮೇಘಾ, ಅಂಬಿಗರ ಸಮುದಾಯದ ಜಿಲ್ಲಾ ಗೌರವಾಧ್ಯಕ್ಷ ವೈ.ಯಮುನೇಶ್, ಜಿಲ್ಲಾ ಸಹ ಕಾರ್ಯದರ್ಶಿ ಅಂಬಿಗರ ಮಂಜುನಾಥ, ಹೊಸಪೇಟೆ ತಾಲೂಕಾಧ್ಯಕ್ಷ ಗಾಳೆಪ್ಪ ಇತರರಿದ್ದರು.

# ಗಂಗಾಮತಸ್ಥರನ್ನು ಎಸ್ಟಿಗೆ ಸೇರಿಸಲು ಆಗ್ರಹ

### ತಾಲೂಕು ಗಂಗಾಮತಸ್ಥ ಸಮಾಜದ ಅಧ್ಯಕ್ಷ ಎಲಿಗಾರ ನಾಗರಾಜ ಒತ್ತಾಯ



**ಹಂಪಿ ಟೈಮ್ಸ್ ಕಂಪ್ಲಿ**

ಪಟ್ಟಣದ ತಹಸೀಲ್ದಾರ್ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತ್ಯುತ್ಸವ ಮಂಗಳವಾರ ಜರುಗಿತು.

ತಾಲೂಕು ಗಂಗಾಮತಸ್ಥ ಸಮಾಜದ ಅಧ್ಯಕ್ಷ ಎಲಿಗಾರ ನಾಗರಾಜ ಮಾತನಾಡಿ, ಎಲ್ಲಾ ಅರ್ಹತೆ ಹೊಂದಿದ ಗಂಗಾಮತಸ್ಥರನ್ನು ಕೂಡಲೇ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಬೇಕು. ಇದಕ್ಕಾಗಿ ಪಟ್ಟಣದಿಂದ ಸೂಕ್ತ ಹೋರಾಟ ಹಮ್ಮಿಕೊಳ್ಳ ಲಾಗುವುದು ಎಂದರು.

ಗಂಗಾಮತಸ್ಥ ಸಮುದಾಯದ ಮುಖಂಡ ಅಯ್ಯೋದಿ ವೆಂಕಟೇಶ ಮಾತನಾಡಿ, ಸಮಾಜ ತಿದ್ದುವಲ್ಲಿ, ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಮೊದಲಾದ ಮಾನವೀಯ ನೆಲೆಯುಳ್ಳ ಕಳಕಳಿಯ ವಚನಗಳನ್ನು ರಚಿಸುವಲ್ಲಿ ಅಂಬಿಗರ ಚೌಡಯ್ಯನವರು ಮುಂಚೂಣಿಯಲ್ಲಿದ್ದಾರೆ. ಚೌಡಯ್ಯನವರ ತತ್ವ ಆದರ್ಶಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಗ್ರೇಡ್–2ತಹಸೀಲ್ದಾರ್ ಎಂ.ಆರ್.ಷಣ್ಮುಖ, ಶಿರಸ್ತೆದಾರ ಎಸ್.ಡಿ.ರಮೇಶ, ನಿಜಶರಣ ಅಂಬಿಗರ ಚೌಡಯ್ಯ ಸಂಘದ ಅಧ್ಯಕ್ಷ ಕರೇಕಲ್ ಪ್ರಕಾಶ, ಪ್ರಮುಖರಾದ ಬಿ.ಸಿದ್ದಪ್ಪ, ಕೆ. ಮನೋಹರ, ಬಿ.ಈರಪ್ಪ, ಬಿ.ವೀರಭದ್ರಪ್ಪ, ಕಟ್ಟೆ ಸಣ್ಣ ದುರುಗಪ್ಪ, ಎಸ್.ನಂದ್ಯೆಪ್ಪ, ಎಸ್.ಸುರೇಶ್, ಬಿ.ರಮೇಶ, ಯು.ವೆಂಕಟೇಶ, ಶೆರೆಗಾರ ರಾಜ, ಯು.ವಿರುಪಣ್ಣ, ಶಿವಕುಮಾರ, ಬಸವರಾಜ, ಅಯ್ಯೋದಿ ರಮೇಶ, ಇಟಗಿ ಈರಣ್ಣ, ಕಂದಾಯ ಅಧಿಕಾರಿಗಳಿದ್ದರು.

ಇದಕ್ಕು ಮುನ್ನಾ ಕೋಟೆಯಲ್ಲಿ ನಿಜಶರಣ ಅಂಬಿಗರ ಚೌಡಯ್ಯ ವೃತ್ತದಲ್ಲಿ ಜಯಂತ್ಯುತ್ಸವ ಆಚರಿಸಲಾಯಿತು. ಮಾರುತಿನಗರದಲ್ಲಿ ಅಂಬಿಗರ ಚೌಡಯ್ಯ ವೃತ್ತದ ನಾಮಫಲಕ ಉದ್ಘಾಟಿಸಲಾಯಿತು. ಗಂಗಾಮತಸ್ಥರು ಬೈಕ್ ರ‍್ಯಾಲಿ ಮೂಲಕ ಸಾಗಿ ತಹಸೀಲ್ದಾರ್ ಸಭಾಂಗಣದಲ್ಲಿ ಸಮಾವೇಶಗೊಂಡರು.

## ತಹಶೀಲ್ದಾರ್ ಎಂ.ರೇಣುಕಾ ಹೇಳಿಕೆ

# ಶ್ರದ್ಧೆಯ ಕಾಯಕದಲ್ಲಿ ದೇವರನ್ನು ಕಾಣಿರಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ನಿಜ ಶರಣ ಅಂಬಿಗರ ಚೌಡಯ್ಯನವರು ನೇರ ನುಡಿಯವರಾಗಿದ್ದರು. ಹೀಗಾಗಿಯೇ ಅವರಿಗೆ ನಿಜ ಶರಣ ಅಂತಾ ಬಿರುದು ಬಂದಿದೆ ಎಂದು ತಹಶೀಲ್ದಾರ್ ಎಂ. ರೇಣುಕಾ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಮಂಗಳವಾರ ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಗಂಗಾ ಮತಸ್ಥ ಸಮಾಜದಿಂದ ಹಮ್ಮಿಕೊಂಡಿದ್ದ ನಿಜ ಗುಣ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಅಂಬಿಗರ ಚೌಡಯ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ದೋಣಿ ನಡೆಸುವ ಕಾಯಕ ಮಾಡುತ್ತಿದ್ದ ಅಂಬಿಗರ ಚೌಡಯ್ಯ, ತಮ್ಮ ವೃತ್ತಿಯನ್ನೇ ಕೈಲಾಸ ಎಂದು ನಂಬಿದ್ದರು. ಯಾವುದೇ ಕೆಲಸವನ್ನು ಶ್ರದ್ಧೆಯಿಂದ ಮಾಡಿದಲ್ಲಿ ದೇವರನ್ನು ಕಾಣಬಹುದಾಗಿದೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಸಮಾಜದಲ್ಲಿ ಮೇಲು ಕೀಳು, ಮೂಢ ನಂಬಿಕೆ, ಡಂಭಾಚಾರಗಳನ್ನು ಯಾವುದೇ ಅಳುಕಿಲ್ಲದೆ ತಮ್ಮ ವಚನಗಳ ಮೂಲಕ ಟೀಕಿಸಿದ್ದಾರೆ. ಇದರಿಂದ ಅವರು ಸಮಾಜ ಸುಧಾರಣೆ ಮಾಡಲು ಸಹಕಾರಿಯಾಯಿತು. ಇಂತಹ ನಿಜ ಗುಣ ಶರಣರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು. ಚೌಡಯ್ಯನವರ ವಚನಗಳು ನಮ್ಮೆಲ್ಲರಿಗೂ ದಾರಿದೀಪವಾಗಿವೆ. ಸಮಾಜದಲ್ಲಿ ಮುಂದೆ ಬರಬೇಕಾದರೆ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಒದಗಿಸಬೇಕು.

ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ನರಸಪ್ಪ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಎಸ್. ಜಗದೀಶ್ ಮಾತನಾಡಿದರು.

ಗ್ರೇಡ್–2 ತಹಶೀಲ್ದಾರ್ ವಿ.ಕೆ. ನೇತ್ರಾವತಿ, ಸಿರೆಸ್ತೇದಾರ್ ಮಹಮದ್ ಗೌಸ್, ಉಪ ತಹಶೀಲ್ದಾರ್ ಚಂದ್ರಶೇಖರ್, ಗಂಗಾ ಮತಸ್ಥ ಸಮಾಜದ ಅಧ್ಯಕ್ಷ ಹುಲಿರಾಜ, ಕಾರ್ಯದರ್ಶಿ ಕುಬೇರ, ಮುಖಂಡರಾದ ಪ್ರಕಾಶ್, ಬೇಕರಿ ಸುರೇಶ್, ಶ್ರೀನಿವಾಸ್, ಅನಿತಾ, ಗೋವಿಂದಪ್ಪ, ಶಿವಣ್ಣ, ಬಸವರಾಜ, ರಾಘವೇಂದ್ರ ಹಾಗೂ ತಾಲ್ಲೂಕು ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

# ಜ. 24 ರಂದು ಕೊಪ್ಪಳದಲ್ಲಿ ವಾಕ್ ಇನ್ ಇಂಟರ್‌ವ್ಯೂವ್

**ಹಂಪಿ ಟೈಮ್ಸ್ ಹೊಸಪೇಟೆ**

ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಇದರ ಜನವರಿ 24 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಈ ಸಂದರ್ಶನದಲ್ಲಿ ಖಾಸಗಿ ಸಂಸ್ಥೆಯವರು ಭಾಗವಹಿಸಿ, ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಅರ್ಹ ಪಿಯುಸಿ ಅಥವಾ ತತ್ಸಮಾನ, ಯಾವುದೇ ಪದವಿ (ಬಿ,ಇ ಹೊರತುಪಡಿಸಿ) ಅಭ್ಯರ್ಥಿಗಳು ಈ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಬಹುದು. 18 ರಿಂದ 30 ವರ್ಷ ವಯೋಮಾನದ ಆಸಕ್ತ ಅರ್ಹ ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು 3 ಪ್ರತಿಗಳೊಂದಿಗೆ ಆಧಾರ್ ಕಾರ್ಡ್ ಪ್ರತಿ, ಬಯೋಡೆಟಾ ಹಾಗೂ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ಈ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ, ದೂ.ಸಂ: 08539–220859 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

# ಜಿಲ್ಲಾಸ್ಪತ್ರೆಯಲ್ಲಿ ಮೆದುಳು–ನರಸಮಸ್ಯೆಗೆ ತಜ್ಞರು ಲಭ್ಯ : ಡಿಹೆಚ್‌ಓ

**ಹಂಪಿ ಟೈಮ್ಸ್ ಬಳ್ಳಾರಿ**

ಮೆದುಳು ಆರೋಗ್ಯ ಸಂಬಂಧಿಸಿದ ಕಾಯಿಲೆಗಳಿಗೆ ಬಳ್ಳಾರಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ತಜ್ಞರಿಂದ



ಸೌಲಭ್ಯವಿದ್ದು, ಇದರ ಸದುಪಯೋಗವಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ವಿಭಾಗ ಇವರ ಆಶ್ರಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಫಾರ್ಮಸಿ ಅಧಿಕಾರಿಗಳಿಗೆ ಮಂಗಳವಾರ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮೆದುಳು ಮತ್ತು ನರ ಸಮಸ್ಯೆಗಳಿಗೆ ಜನತೆಯು ಸಾಮಾನ್ಯವಾಗಿ ನಗರದ ವಿಮ್ಸ್ ತಪ್ಪಿದರೆ ಬೆಂಗಳೂರು ಮತ್ತು ಧಾರವಾಡಕ್ಕೆ ತೆರಳುತ್ತಾರೆ. ಇದನ್ನು ತಪ್ಪಿಸಲು ಜಿಲ್ಲಾ ಆಸ್ಪತ್ರೆಯಲ್ಲಿಯೇ ತಜ್ಞರ ಸೌಲಭ್ಯವನ್ನು ಒದಗಿಸಿರುವುದರಿಂದ ಜನತೆಗೆ ಈ ಕುರಿತು ಹೆಚ್ಚಿನ ಮಾಹಿತಿಯನ್ನು ಕ್ಷೇತ್ರ ಮಟ್ಟದಲ್ಲಿ ನೀಡಬೇಕು. ಅನಗತ್ಯ ಆರ್ಥಿಕ ವೆಚ್ಚವನ್ನು ಕಡಿಮೆ ಮಾಡುವುದರ ಜೊತೆಗೆ ಕುಟುಂಬದ ಸದಸ್ಯರ ನೆಮ್ಮದಿಯ ಜೀವನಕ್ಕೆ ಕ್ಷೇತ್ರ ಮಟ್ಟದಲ್ಲಿ ಜಾಗೃತಿಗೊಳಿಸಬೇಕು ಎಂದು ತಿಳಿಸಿದರು.

ರಾಷ್ಟ್ರದ ಹೆಸರಾಂತ ಮನೋ ಆರೈಕೆ ಕೇಂದ್ರವಾಗಿರುವ ನಿಮ್ಹಾನ್ಸ್ ಸಹಯೋಗ ಮತ್ತು ಸಲಹೆಗಳೊಂದಿಗೆ ನರರೋಗ ತಜ್ಞರ ಉಪಸ್ಥಿತಿಯಲ್ಲಿ ಮೆದುಳು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಆಪ್ತಸಮಾಲೋಚನೆ ನಡೆಸಲಾಗುವುದು. ಮುಖ್ಯವಾಗಿ ಪಾರ್ಶ್ವವಾಯು, ಅಪಸ್ಮಾರ, ಮರೆವು ಕಾಯಿಲೆ ಮತ್ತು ತಲೆನೋವು ಸೇರಿದಂತೆ ನರ ವೈಜ್ಞಾನಿಕ ಕಾಯಿಲೆಗಳಿಂದ ಬಳಲುತ್ತಿರುವವರು ಆರಂಭಿಕ ಹಂತದಲ್ಲಿಯೇ ತಜ್ಞರನ್ನು ಸಂಪರ್ಕಿಸುವ ಮೂಲಕ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಮಾನಸಿಕ ಆರೋಗ್ಯ ಅನುಷ್ಟಾನ ಕಾರ್ಯಕ್ರಮ ಅಧಿಕಾರಿ ಡಾ.ವೀರೇಂದ್ರ ಕುಮಾರ್ ಮಾತನಾಡಿ, ಈಗಾಗಲೇ ಜಿಲ್ಲಾ ಶಸ್ತ್ರಚಿಕಿತ್ಸಕರ ಅಧೀನದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಮೆದುಳು ಆರೋಗ್ಯ ವಿಭಾಗ ಆರಂಭಿಸಲಾಗಿದ್ದು, ವೈದ್ಯರು ಫಿಜಿಯೋಥೆರಫಿಸ್ಟ್, ಸ್ಪೀಚ್‌ಥೆರಫಿಸ್ಟ್, ಮನೋ ಶಾಸ್ತ್ರಜ್ಞರು ಹಾಗೂ ಶುಶ್ರೂಷಣಾಧಿಕಾರಿ ಒಳಗೊಂಡ ವೈದ್ಯಕೀಯ ತಂಡವು ಕಾರ್ಯನಿರ್ವಹಿಸುತ್ತಿದೆ ಎಂದರು.

ಮಾನಸಿಕ ಆರೋಗ್ಯ ಸಮಸ್ಯೆಗಳು ಕಂಡುಬರುವಂತಹವವರು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಮನೋ ತಜ್ಞರ ಮೂಲಕ ಎಲ್ಲಾ ತಾಲ್ಲೂಕುಗಳಲ್ಲಿ ಪ್ರತಿ ಮಂಗಳವಾರ ಮನೋಚೈತನ್ಯ ಕಾರ್ಯಕ್ರಮವನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಕಂಪ್ಲಿ, ಕುರುಗೋಡು, ಮೋಕಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯು ಸಹ ಶಿಬಿರಗಳನ್ನು ಏರ್ಪಡಿಸಿ ಸ್ಥಳದಲ್ಲಿಯೇ ತಪಾಸಣೆ, ಆಪ್ತಸಮಾಲೋಚನೆ ಹಾಗೂ ಔಷದೋಪಚಾರ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಇದರ ಸೌಲಭ್ಯ ಪಡೆಯುವ ಮೂಲಕ ಆರಂಭದಲ್ಲಿಯೇ ಮಾನಸಿಕ ಆರೋಗ್ಯ ಗುಣಪಡಿಸಲು ಜನತೆಗೆ ಜಾಗೃತಿ ನೀಡಲು ತಿಳಿಸಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಮೆದುಳು ಆರೋಗ್ಯ ಉಪಕ್ರಮದ ಜಿಲ್ಲಾ ಸಂಯೋಜಕ ಸಣ್ಣ ಕೇಶವ್, ಡಿಎಸ್‌ಆರ್‌ಸಿ ಆಪ್ತ ಸಮಾಲೋಚಕರಾದ ಪರಿಮಳ ಸೇರಿದಂತೆ ಜಿಲ್ಲೆಯ ಎಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಫಾರ್ಮಸಿ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಂಥಾಲಯ ವಿಜ್ಞಾನ ತರಬೇತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಬೆಂಗಳೂರು, ಮಂಗಳೂರು, ಧಾರವಾಡ ಮತ್ತು ಕಲಬುರಗಿ ಕೇಂದ್ರಗಳಲ್ಲಿ ಆರು ತಿಂಗಳ ಅವಧಿಯ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲಾ ಪ್ರವೇಶಾತಿಗೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜ.31 ರವರೆಗೆ ವಿಸ್ತರಿಸಲಾಗಿದೆ ಎಂದು ಬಳ್ಳಾರಿ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

• Admissions
• Requirements
• Firm Branding
• Public Notice
• Change of Name
BOOK NOW!
Book Your Advertisements
in Leading Local HAMPI TIMES
Print & Digital News Paper
9482599089 / 9448633038
• Obituary
• Remembrance
• Birthday wish ads
• Events Display &
• Classified ads
SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.